ಪದ್ಯಾಣ

ಪುಟ್ಟು ನಾರಾಯಣ ಭಾಗವತರ

ನೆನಪಿನಲ್ಲಿ

ಪದ್ಯಾಣ ಪ್ರಶಸ್ತಿ 2018



- ಪ್ರಸಂಗ -

ಏಕಚಕ್ರ ವೀರ ವಿಜಯ

ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿ

ರಾಜಗೋಪಾಲ ಕೃಷ್ಣ ಭಟ್ ಇವರಿಗೆ
ಗೌರವ ಪೂರ್ವಕವಾಗಿ –

07-1-19

ಯಕ್ಷಗಾನ ಭಾಗವತ
ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿಯವರಿಗೆ

ಪದ್ಯಾಣ ಪ್ರಶಸ್ತಿ

26-11-2018

ಸಂಪಾದಕ
ನಾ. ಕಾರಂತ ಪೆರಾಜೆ

ಪ್ರಕಾಶನ
ಪದ್ಯಾಣ ಪ್ರಶಸ್ತಿ ಸಮಿತಿ
ಕಲ್ಮಡ್ಕ
ಸುಳ್ಯ ತಾಲೂಕು (ದ.ಕ.)
8884880100

ಪದ್ಯಾಣ ಪ್ರಶಸ್ತಿ

ಪುಟ್ಟು ನಾರಾಯಣ
ಭಾಗವತರು

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕರೋಪಾಡಿ ಗ್ರಾಮದಲ್ಲಿದೆ, – 'ಪದ್ಯಾಣ'. ಎಲ್ಲಾ ಸ್ಥಳನಾಮಗಳಂತೆ ಪದ್ಯಾಣವೂ ಒಂದು. ಯಕ್ಷಗಾನ ಹಿನ್ನೆಲೆಯಲ್ಲಿ ಪದ್ಯಾಣಕ್ಕೆ ಪ್ರತ್ಯೇಕ ಸ್ಥಾನ. ಕಲೆಯ ಸೊಡರೊಂದು ಹಬ್ಬಿಸಿದ ಪ್ರಕಾಶದ ನಿಕಶವು ಪದ್ಯಾಣ ಊರಿಗೆ ಮಾನ ತಂದಿದೆ, ಸಂಮಾನ ತಂದಿದೆ.

ಇಲ್ಲಿನ ಪುಟ್ಟು ನಾರಾಯಣ ಭಾಗವತರು ಜನಾನುರಾಗಿ. ಇವರು ಮಹಾನ್ ಗುರು ಮಾಂಬಾಡಿ ನಾರಾಯಣ ಭಾಗವತರಿಗೆ ಗುರುಸದೃಶ. ದೊಡ್ಡ ಬಲಿಪ ನಾರಾಯಣ ಭಾಗವತರು, ಕುಂಡೆಚ್ಚ ಭಾಗವತರು ಮೇಳಕ್ಕೆ ರಜೆಯಾದಾಗ ಪುಟ್ಟು ನಾರಾಯಣ ಭಾಗವತರು ಆ ಸ್ಥಾನವನ್ನು ತುಂಬುತ್ತಿದ್ದರು. ಅವರಿಗೆ ನೂರಾರು ಪ್ರಸಂಗಗಳು ಕಂಠಸ್ಥ. ಆಗ ಯಕ್ಷಗಾನದಲ್ಲಿ 'ಬಲಿಪ ಮತ್ತು ಅಗರಿ' ಶೈಲಿಗಳೆರಡೇ ಪ್ರಚಲಿತವಿದ್ದುವು. ಪುಟ್ಟು ಭಾಗವತರದು ಬಲಿಪ ಶೈಲಿಯನ್ನು ಹೋಲುವ ಭಾಗವತಿಕೆ.

ಇವರ ನಂತರದ ತಲೆಮಾರಿಗೆಲ್ಲಾ ಯಕ್ಷಗಾನವು ಆರಾಧನೆ. ಇಡೀ ಕುಟುಂಬದವರು ನಾದದ ಗುಂಗಿನಲ್ಲಿ ವೈಯಕ್ತಿಕವಾದ ಬದುಕನ್ನು ಕಟ್ಟಿಕೊಂಡು ಸಮಾಜದಲ್ಲಿ ಗೌರವಯುತವಾದ ಸ್ಥಾನಗಳನ್ನು ಪಡೆದಿದ್ದಾರೆ.

ಈ ಹಿನ್ನೆಲೆಯಲ್ಲಿ ಪದ್ಯಾಣ ಕುಟುಂಬವು ಯಕ್ಷಗಾನದಿಂದ ಪಡೆದ ಕೀರ್ತಿ, ಗೌರವ ಮತ್ತು ಸರ್ವಾದರಣೀಯವಾದ ಸ್ಥಾನವನ್ನು ಪಡೆದುದರ ಕೃತಜ್ಞತೆಗಾಗಿ '**ಪದ್ಯಾಣ ಪ್ರಶಸ್ತಿ**'ಯನ್ನು ಸ್ಥಾಪಿಸಲಾಗಿದೆ. ಹಿರಿಯ ಭಾಗವತ ಅಗರಿ ರಘುರಾಮ ಭಾಗವತರು, ಬಲಿಪ ನಾರಾಯಣ ಭಾಗವತರು ಹಿಂದಿನ ವರುಷಗಳಲ್ಲಿ ಪ್ರಶಸ್ತಿಗೆ ಭಾಜನರಾಗಿದ್ದರು. ಈ ವರುಷ ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿ – ಇವರಿಗೆ ಪದ್ಯಾಣ ಪ್ರಶಸ್ತಿ.

ಮನಸ್ಸಾವರಿಸುವ ಮೋಹಸಿರಿ

ಅರ್ಧ ಶತಮಾನದ ಯಕ್ಷ ಪಯಣ. ಈಗವರಿಗೆ ಎಪ್ಪತ್ತೈದರ ಹರೆಯ. ಹದಿನಾರು ವರುಷಗಳ ಮೇಳ ತಿರುಗಾಟ. ಮಿಕ್ಕಂತೆ ಹವ್ಯಾಸಿ ಕ್ಷೇತ್ರಕ್ಕೆ ಸಮರ್ಪಿತ. ಅರ್ಧ ದಕ್ಷಿಣ ಕನ್ನಡದುದ್ದಕ್ಕೂ ಮೊಳಗಿದ ಭಾಗವತಿಕೆ. ಯಕ್ಷರಾತ್ರಿಗಳನ್ನು ಸುಲಲಿತವಾಗಿ ಬೆಳಗು ಮಾಡಿದ ಭಾಗವತ. ಪೌರಾಣಿಕ ಪ್ರಸಂಗಗಳ ಲೀಲಾಜಾಲ ನಿರ್ವಹಣೆ. ಹಿಮ್ಮೇಳದ ಸರ್ವಾಂಗ ಜ್ಞಾನ. ಈ ಮಾತುಗಳು ಉತ್ಪ್ರೇಕ್ಷೆಯಂತೆ ತೋರಿದರೂ ಉತ್ಪ್ರೇಕ್ಷೆಯಲ್ಲ. ಇದು ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿಗಳ ಕಲಾ ಯಾನದ ನೋಟ.

ಒಂದು ಕಾಲಘಟ್ಟ. ಮೇಳಗಳು ತಿರುಗಾಟ ಹೊರಟ ಬಳಿಕ ಶಾಸ್ತ್ರಿಗಳು ಬ್ಯುಸಿ. ವಾರಕ್ಕೆ ಎಂಟು ದಿವಸವಿದ್ದರೂ ನಡೆಯುತ್ತಿತ್ತು! ಹಿಮ್ಮೇಳ ಕಲಾವಿದರ ಅಲಭ್ಯತೆ. ಇದ್ದರೂ ಸಮರ್ಪಕವಾಗಿ ರಂಗವನ್ನು ನಿರ್ದೇಶಿಸಬಲ್ಲ ಸರ್ವಸಮರ್ಥ ಇವರೊಬ್ಬರೇ. ಯಕ್ಷಗಾನ ಸಂಘಗಳ ಜೀವಂತಿಕೆಯ ಹಿಂದೆ ಶಾಸ್ತ್ರಿಗಳ ಶಾರೀರದ ಕೊಡುಗೆ ಅಜ್ಞಾತ. ಸಂಘಗಳು ಕಲಾವಿದರನ್ನು ಸೃಷ್ಟಿ ಮಾಡುತ್ತವೆ. ಪ್ರದರ್ಶನಗಳಲ್ಲಿ ಭಾಗವತ ಕಲಾವಿದರ ಬೆಳವಣಿಗೆಗೆ ಕಾರಣನಾಗುತ್ತಾನೆ. ಈ ಅರ್ಹತೆಯಲ್ಲಿ ರೂಪುಗೊಂಡ ಕಲಾವಿದರ ಸಂಖ್ಯೆ ಅಗಣಿತ. ಈಗ ಬಹುತೇಕ ಸಂಘಗಳು ಫಲಕಗಳಿಗೆ ಸೀಮಿತವಾಗಿದೆ!

ತೆಂಕಬೈಲು ಶಾಸ್ತ್ರಿಗಳ ತಂದೆ ಕೃಷ್ಣ ಭಟ್. ತಾಯಿ ಸಾವಿತ್ರಿ ಅಮ್ಮ. ತಂದೆಗೆ ಮಗ ವೈದಿಕನಾಗಬೇಕೆಂಬ ಹಂಬಲ. ತಾಯಿಯ ಪರಂಪರೆಯಿಂದ ಬಂದ ಯಕ್ಷಗಾನ. ಇವೆರಡೂ ಸ್ವಲ್ಪ ಕಾಲ ಜತೆಜತೆಗೆ ಹೆಜ್ಜೆಯೂರಿತು. ರಾತ್ರಿ ಆಟ, ಹಗಲು ತಂದೆಯೊಂದಿಗೆ ಸಾಥ್. ಬಿಡುವಿರದ ದುಡಿಮೆ. ಮುಂದೆ ಕುಲವೃತ್ತಿಯನ್ನು ಮರೆಯದ ಯಕ್ಷಗಾನವೇ ವೃತ್ತಿಯಾಯಿತು.

ಶಾಸ್ತ್ರಿಗಳು ಓದಿದ್ದು ಎಂಟನೇ ತರಗತಿ. ಐದು ವರುಷ ಪಾರಂಪರಿಕ ವೈದಿಕ ಅಭ್ಯಾಸ. ನಾಲ್ಕು ವರುಷ ಶಾಸ್ತ್ರೀಯ ಸಂಗೀತ ಕಲಿಕೆ. ತನ್ನೂರು ಬಂಟ್ವಾಳ ತಾಲೂಕಿನ ಕರೋಪಾಡಿ ಗ್ರಾಮದ ಮಿತ್ತನಡ್ಕದಲ್ಲಿ ಟೆಂಟ್ ಊರಿದ ಎಲ್ಲಾ ಮೇಳಗಳಿಗೂ ಖಾಯಂ ಪ್ರೇಕ್ಷಕ. ಇವರ ಮಾವಂದಿರಲ್ಲಿ ಓರ್ವ ಭಾಗವತ, ಮತ್ತೋರ್ವ ಮದ್ದಳೆಗಾರ. ಇವರಿಬ್ಬರಿಂದಲೂ ಹಿಮ್ಮೇಳದ ಮೊದಲ ಪಾಠ.

ತಾಳ, ರಾಗಗಳ ಅನುಭವದಲ್ಲಿ ಪ್ರಸಂಗಗಳ ಪದ್ಯಗಳ ಸ್ವ-ಕಲಿಕೆ. ಗುರು ಮಾಂಬಾಡಿ ನಾರಾಯಣ ಭಾಗವತರಲ್ಲಿ ಕಲಿತ ಪಾಠಗಳ ಶುದ್ಧೀಕರಣ. ಆ ಕಾಲಘಟ್ಟದಲ್ಲಿ ಮಾಂಬಾಡಿ ಗುರುಗಳ ಪುತ್ರ ಮಾಂಬಾಡಿ ಸುಬ್ರಹ್ಮಣ್ಯ ಭಟ್, ಪದ್ಯಾಣ ಶಂಕರನಾರಾಯಣ ಭಟ್, ತೆಂಕಬೈಲು - ಸಮಪ್ರಾಯದ ಹೊಂತಕಾರಿಗಳು! ಪದ್ಯಾಣರು ಚೆಂಡೆಗೆ, ಮಾಂಬಾಡಿಯವರ ಮದ್ದಳೆ, ಶಾಸ್ತ್ರಿಗಳ ಭಾಗವತಿಕೆ. ಈ ಜತೆಗಾರಿಕೆಯು 'ಕರೋಪಾಡಿ ಹಿಮ್ಮೇಳ' ಎಂದೇ ಖ್ಯಾತಿಯಾಗಿತ್ತು.

ಸೊರ್ನಾಡು ಮೇಳದಿಂದ ವ್ಯವಸಾಯ. ಮುಂದೆ ಬಪ್ಪನಾಡು, ಕುಂಡಾವು, ಸುಂಕದಕಟ್ಟೆ, ಮಲ್ಲ, ಕುಂಟಾರು, ಮಧೂರು ಮೇಳಗಳಲ್ಲಿ ತಿರುಗಾಟ. ಭಾಗವತನೇ ನಿರ್ದೇಶಕನೆಂಬ ಹಿರಿ ಮಾತಿಗೆ ವಿಧೇಯ. ಆ ಸ್ಥಾನಕ್ಕೆ ಎಂದೂ ಚ್ಯುತಿ ತಂದವರಲ್ಲ. ಹಲವರ ಪಾಲಿಗೆ ಇವರು ನಿಷ್ಠುರ ವ್ಯಕ್ತಿ! ರಂಗ ಮತ್ತು ಮೇಳದ ವ್ಯವಹಾರಗಳಲ್ಲಿ ಸ್ವಲ್ಪ ಆಚೀಚೆ ಆದರೂ ಸಹಿಸದ ಗುಣ. ನೇರವಾಗಿ ಹೇಳುವ ವ್ಯಕ್ತಿತ್ವ. ಮುಖಸ್ತುತಿ ಇಲ್ಲದೇ ಇದ್ದುದರಿಂದ ವೃತ್ತಿ ಮೇಳದ ವ್ಯವಸ್ಥೆಯು ಶಾಸ್ತ್ರಿಗಳಿಗೆ ಪ್ರತಿಕೂಲವಾದುದೇ ಹೆಚ್ಚು. ವೈಯಕ್ತಿಕ ಅನನುಕೂಲಗಳಿಂದ ಮೇಳದ ಸಹವಾಸಕ್ಕೆ ವಿದಾಯ.

ಪೌರಾಣಿಕ ಪ್ರಸಂಗಗಳು ಶಾಸ್ತ್ರಿಗಳಲ್ಲಿ ಮೇಲ್ಮೆ ಸಾಧಿಸಿವೆ. 'ದಕ್ಷಾಧ್ವರ, ಕರ್ಣಪರ್ವ, ದೇವಿ ಮಹಾತ್ಮೆ, ಕೃಷ್ಣಲೀಲೆ-ಕಂಸವಧೆ, ಭಾರ್ಗವ ವಿಜಯ, ಕೃಷ್ಣಾರ್ಜುನ..' ಹೀಗೆ ಹಲವು ಪ್ರಸಂಗಗಳ ಪದ್ಯಗಳು ರಸಪಾಕದಲ್ಲಿ ಮಿಂದೇಳುತ್ತಿದ್ದುವು! ಓರ್ವ ಕಲಾವಿದರ ಸೇವೆಯೋ ಕೊಡುಗೆಯೋ ಇಂತಿಷ್ಟು ವರುಷಗಳ ತಿರುಗಾಟವೆಂಬ ಮಾನದಂಡದಿಂದ ದಾಖಲಾಗುತ್ತದೆ. ಶಾಸ್ತ್ರಿಗಳ ಕೊಡುಗೆಯು ಹಾಗಲ್ಲ. ಪ್ರಸಂಗಗಳ ಪದ್ಯಗಳು ಜನಮಾನಸದಲ್ಲಿ ಸ್ಥಾಯಿಯಾಗಿ ನೆಲೆಗೊಳಿಸಿದ ರಸಮಾನಗಳ ಮಾನದಂಡವು ಶಾಸ್ತ್ರಿಗಳ ಕೊಡುಗೆ!

"ಪುತ್ತೂರಿನ ದರ್ಭೆಯಲ್ಲಿ ಜರುಗಿದ ದಕ್ಷಾಧ್ವರ ಪ್ರಸಂಗದ ಭಾಗವತಿಕೆಗೆ ಅಭಿಮಾನಿಗಳು ನೋಟಿನ ಹಾರ ಹಾಕಿದ್ದರು" ಎನ್ನುವಾಗ ಶಾಸ್ತ್ರಿಗಳಿಗೆ ಮುಜುಗರ. ಹೊಗಳಿಕೆಗೆ ಮುದುಡುತ್ತಾರೆ. ತೆಗಳಿಕೆಗೆ ಕಿವುಡಾಗುತ್ತಾರೆ! ನೋಟಿನ ಹಾರ ಹಾಕುವ ಸಮಯದಲ್ಲಿ ಭಾಗವತಿಕೆಯನ್ನು ಅನುಭವಿಸುವ ಪ್ರೇಕ್ಷಕರಿದ್ದರು. ಅವರು ಭಾಗವತಿಕೆಯನ್ನು ಮಾಡದಿದ್ದರೂ ಭಾಗವತಿಕೆಯ ಜ್ಞಾನವನ್ನು ಹೊಂದಿದ್ದರು ವೈಭವಕ್ಕೋ, ಗೌಜಿಗೋ ನೋಟಿನ ಹಾರ ಹಾಕಿದ್ದಲ್ಲ. ಇದು ಅಪ್ಪಟ ರಂಗ ಅಭಿಮಾನ.

ಯಕ್ಷಗಾನದಲ್ಲಿ ಅಗರಿ, ಬಲಿಪ, ಮಂಡೆಚ್ಚ ಶೈಲಿ.. ಹೀಗೆ ಸ್ಥಾಪಿತ ಶೈಲಿಗಳಿವೆ. ಇವರೆಲ್ಲರ ಮಧ್ಯೆ 'ತೆಂಕಬೈಲು ಶೈಲಿ' ಮಿಂಚಿತ್ತು ಎಂದರೆ ಶಾಸ್ತ್ರಿಗಳ ಶಾರೀರ ಮತ್ತು ಭಾಗವತಿಕೆಯ ಪರಿಶ್ರಮ ಗಮನಿಸಬೇಕು. ಹಾಗೆಂದು ಯಾರದ್ದೇ ಅನುಕರಣೆಯಲ್ಲ. ಪದ್ಯಗಳ ಸಾಹಿತ್ಯ, ಸೊಗಸುಗಾರಿಕೆ, ಮೋಹಕಗಳಿಂದ ಪದ್ಯಗಳನ್ನು ಕೇಳಲೆಂದೇ ಬರುವ ಪ್ರೇಕ್ಷಕರಿದ್ದರು.

ಘಟನೆಯೊಂದನ್ನು ನೆನಪಿಸಿಕೊಳ್ಳುತ್ತಾರೆ - ಒಂದು ಸಮಾರಂಭದಲ್ಲಿ ಅನುಕರಣಾ ವಿದ್ಯೆ(ಮಿಮಿಕ್ರಿ)ಯಲ್ಲಿ ಪರಿಣತರಾದವರೊಬ್ಬರು ಬೇರೆ ಬೇರೆ ಭಾಗವತರ ಧ್ವನಿಗಳನ್ನು ಹಾಡಿ ರಂಜಿಸಿದರಂತೆ. ನಿರೂಪಕರು ತೆಂಕಬೈಲು ಭಾಗವತರ ಹೆಸರು ಘೋಷಿಸಿದಾಗ 'ಅವರ ಭಾಗವತಿಕೆಯನ್ನು ಅನುಕರಿಸಲು ಕಷ್ಟ' ಎಂದರಂತೆ.

ಬಯಲಾಟಗಳ ಸೊಗಸನ್ನು, ವ್ಯವಸ್ಥೆಯನ್ನು ಅನುಭವದ ನೆನಪಿನಿಂದ ಹೇಳುತ್ತಾರೆ. "ಹಿಂದಿನ ಕಲಾವಿದರಲ್ಲಿ ರಂಗನಿಷ್ಠೆ ಹೇರಳವಾಗಿತ್ತು. ಅಭಿವ್ಯಕ್ತಿಯಲ್ಲಿ ರಾಜಿಯಿದ್ದಿರಲಿಲ್ಲ. ಕುಣಿತ, ಅಭಿನಯ, ಮಾತುಗಾರಿಕೆ ಸಮಪ್ರಮಾಣದಲ್ಲಿದ್ದುವು. ಇಡೀ ರಾತ್ರಿಯ ಆಟ. ಪ್ರೇಕ್ಷಕರಿಗೆ ಕತೆಯನ್ನು ಉಣಿಸಬೇಕು. ಒಬ್ಬನೇ ಭಾಗವತ. ಮೂರು ನಿಮಿಷದ ಪದ್ಯಕ್ಕೆ ಐದು ನಿಮಿಷದ ಅರ್ಥ. ಹೀಗಾದ್ರೆ ಇಡೀ ರಾತ್ರಿಯಲ್ಲಿ ಒಂದು ಕಥಾನಕವನ್ನು ಮುಗಿಸುವುದಕ್ಕೆ ಸಾಧ್ಯವಿದೆ. ಈಗ ಪ್ರಸಂಗಗಳು ತುಂಡು ತುಂಡಾಗಿವೆ, ಬಿಡಿ."

"ಬರಬರುತ್ತಾ ಭಾಗವತರು ಇಬ್ಬರಾದರು. ಶುರುವಿನ ಭಾಗವತ ನಿಧಾನಗತಿಯಲ್ಲಿ ಪದ್ಯ ಹೇಳಿದರು. ನಂತರದವರಿಗೆ ಆರು ಗಂಟೆಗೆ ಮುಗಿಸುವ ಧಾವಂತ. ಪದ್ಯ, ರಂಗದ ನಡೆಗಳು ವೇಗ ಪಡೆದುವು. ಹೀಗಾಗಿ ನನಗೆ ಆಟ 'ಓಡಿಸಲು' ಅಭ್ಯಾಸವಾಯಿತು! ಬಳಿಕ ಮೂರು ಮಂದಿ ಭಾಗವತರ ನಿಯುಕ್ತಿಯಾಯಿತು. ಈ ಸಂದರ್ಭಗಳಲ್ಲೂ ನಾನೇ ಕೊನೆಯ ಭಾಗವತ! ಪದ್ಯ, ಕಥಾನಕದ ಸ್ಪೀಡ್ ಹೆಚ್ಚಾಯಿತು. ಆಟ ಎಷ್ಟು ಹೊತ್ತಿಗೇ ಶುರುವಾಗಲಿ. ಆರು ಗಂಟೆಗೆ ಮಂಗಲ ಹೇಳುವುದನ್ನು ರೂಢಿಸಿಕೊಂಡಿದ್ದೇನೆ. ನಂತರದ ಪ್ರದರ್ಶನ ಆಟವಾಗದು!" ಶಾಸ್ತ್ರಿಗಳ ಮಾತಿನಲ್ಲಿ ರಂಗದ ಪಲ್ಲಟ, ಭಾಗವತನ ಅಸಹಾಯಕತೆಗಳ ಒಳತೋಟಿಗಳನ್ನು ಕಾಣಬಹುದು.

ಒಟ್ಟೂ ಯಕ್ಷಗಾನ ಕ್ಷೇತ್ರದ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳ ಅನುಭವಿ. ಮೇಳಗಳ ತಿರುಗಾಟ ಮಾಡುತ್ತಾ ಶಿಷ್ಯಂದಿರನ್ನು ರೂಪೀಕರಿಸಿದ ಗುರು. ಏನಿಲ್ಲವೆಂದರೂ ಐನೂರಕ್ಕೂ ಮಿಕ್ಕಿದ ಶಿಷ್ಯರ ಗಡಣ. "ಶಿಷ್ಯಂದಿರಿಗೆ ಹಿಮ್ಮೇಳದ ಪಾಠ ಮಾಡಿದ ತೃಪ್ತಿಯಿದೆ. ನನ್ನ ಶಿಷ್ಯರು ವೃತ್ತಿ ಕಲಾವಿದರಲ್ಲ. ಹವ್ಯಾಸಿಗಳು. ಸಹೃದಯರು. ಇವರೆಲ್ಲಾ ವೃತ್ತಿ ಕಲಾವಿದರಾಗಿರುತ್ತಿದ್ದರೆ 'ಇಂತಹವರ ಶಿಷ್ಯ' ಎಂದು ಪ್ರಚಾರ ಸಿಗುತ್ತಿತ್ತೋ ಏನೋ. ಈಗ ಪ್ರಚಾರದ ಕಾಲವಲ್ವಾ"!

ಯಕ್ಷಗಾನದಲ್ಲಿ 'ತೆಂಕಬೈಲು ಶೈಲಿ' ಎಂದೇ ಪ್ರಚಲಿತವಿರುವ ನಿಮ್ಮ ಸ್ವ-ಶೈಲಿಯ ರೂಪೀಕರಣ ಹೇಗೆ? "ಭಾಗವತಿಕೆಗೆ ಶ್ರೀಕಾರ ಹಾಕಿದ ಮಾವ ಸುಬ್ರಾಯ ಭಟ್ಟರಂತೆ ಮೊದಲು ಹಾಡುತ್ತಿದ್ದೆ. ಹಾಡಿಗೆ ಸಂಗೀತವನ್ನು ಸೇರಿಸಿ ಹಾಡಿದಾಗ ಯಾವುದೋ ಹೊಸ ಶೈಲಿಯೊಂದು ಅನುಭವಕ್ಕೆ ಬಂತು. ಮಾಂಬಾಡಿ ಭಾಗವತರು ತಿದ್ದಿ ತೀಡಿದರು. ವೃತ್ತಿ, ಹವ್ಯಾಸಿ ರಂಗದಲ್ಲಿ ಹಾಡುತ್ತಾ ಹಾಡುತ್ತಾ ಸ್ವಂತದ್ದಾದ ಶೈಲಿ ರೂಪುಗೊಂಡಿತು."

ಅಭಿಮತ

ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿಗಳ ಜತೆ ಮಾತಾಡುತ್ತಿದ್ದಂತೆ ಕಳೆದ ಕಾಲದ ಕಥನಗಳ ಅನುಭವಗಳು ಮಿಂಚಿ ಮರೆಯಾದುವು. ಅವುಗಳಲ್ಲಿ ವಿಷಾದಗಳಿದ್ದುವು, ರಂಗದ ದನಿಗಳಿದ್ದುವು, ಕಷ್ಟ-ಸುಖಗಳ ಮಾತುಕತೆಗಳಿದ್ದುವು, ರಂಗ ಪಲ್ಲಟಗಳಿದ್ದುವು. ಅಂತಹುಗಳ ಮಾದರಿಗಳು ಇಲ್ಲಿವೆ :

* ಕಾಲಮಿತಿಯಿಂದ ಕಲಾವಿದರಿಗೆ ಪ್ರಯೋಜನ. ರಾತ್ರಿ ಒಂದೋ, ಎರಡೋ ಗಂಟೆಯಲ್ಲದೆ ಪ್ರದರ್ಶನ ಮುಗಿಯುವುದಿಲ್ಲ. ಪ್ರಸಂಗ ಚಿಕ್ಕದಾಯಿತು. ರಂಗದ 'ಸ್ಪೀಡ್' ಹೆಚ್ಚಾಯಿತು. ಪೂರ್ತಿಯಾಗಿ ಕಥೆ ಗೊತ್ತಾಗಬೇಕಾದರೆ ಇಡೀರಾತ್ರಿ ಆಟವಾಗಬೇಕು.

* ಕೂಡುಕುಟುಂಬ ವ್ಯವಸ್ಥೆಗಳು ಶಿಥಿಲವಾದ ಬಳಿಕ ಆಟಗಳಿಗೆ ಪ್ರೇಕ್ಷಕರ ಸಂಖ್ಯೆಯೂ ಕಡಿಮೆಯಾಯಿತು. ಉತ್ಸಾಹವಿದ್ದರೂ ಮನೆಯ ರಕ್ಷಣೆ, ಕೆಲಸಕಾರ್ಯಗಳ ಒತ್ತಡದಿಂದ ಆಟದ ಗುಂಗನ್ನು ತನ್ನೊಳಗೆ ಅದುಮಿಟ್ಟುಕೊಳ್ಳುವ ಅನೇಕರಿದ್ದಾರೆ. ಮತ್ತೊಂದು ಕಾಲದ ಪಲ್ಲಟ. ಆಟ ನೋಡುತ್ತಿದ್ದ ಜವ್ವನಿಗರೆಲ್ಲಾ ವಿವಿಧ ಉದ್ಯೋಗಕ್ಕಾಗಿ ಪೇಟೆ ಸೇರಿದರು. ಹಳ್ಳಿ ಖಾಲಿಯಾಯಿತು!

* ಹವ್ಯಾಸಿ ರಂಗ ಚೆನ್ನಾಗಿತ್ತು. ಅದು ಕಲಾವಿದರನ್ನು ಸೃಷ್ಟಿಸುವ ತಾಣ. ಪ್ರಾಕ್ಟೀಸ್ ಮಾಡಿ ಪ್ರದರ್ಶನ ಮಾಡುತ್ತಿದ್ದರು. ಈಗ ಸಂಘಗಳೇ ಇಲ್ಲ! ಕನಿಷ್ಠ ಶಿಸ್ತು ಮಾಯವಾಗಿದೆ. ಸಮಾಲೋಚನೆಗಳಿಲ್ಲ. ಕಥಾನಕ ಶುರುವಾದ ಬಳಿಕ ಅವಸರದಲ್ಲಿ ವೇಷ ಮಾಡಿ ಹೋಗುತ್ತಾರೆ. ಪ್ರದರ್ಶನ ಯಶಸ್ವಿಯಾಗುತ್ತಿಲ್ಲ.

* ಯಕ್ಷಗಾನಕ್ಕೆ ಪೌರಾಣಿಕ ಪ್ರಸಂಗಗಳು ಸೂಕ್ತ. ಕೋಟಿ ಚೆನ್ನಯ್ಯ, ಕಾಂತಾಬಾರೆ ಬೂದಾಬಾರೆ, ತುಳುನಾಡ ಸಿರಿ.. ಮೊದಲಾದ ಪ್ರಸಂಗಗಳಿಗೆ ಪಾಡ್ದನಗಳ ಹಿನ್ನೆಲೆಯಿದೆ. ಯಾವುದೇ ಹಿನ್ನೆಲೆಯಿಲ್ಲದ ಕಲ್ಪಿತ ಪ್ರಸಂಗಗಳು ರಂಗದಲ್ಲಿ ಯಶವಾಗುವುದಿಲ್ಲ. ಆದರೂ ಅದು ಅಲ್ಪಾಯುಷಿ.

* ರಂಗಕ್ಕೆ ಅದರದ್ದೇ ಆದ ಭಾಷೆಯಿದೆ. ಅದು ಕಲಾವಿದರಿಗೆ, ನೇಪಥ್ಯ ಕಲಾವಿದರಿಗೆ ತಿಳಿದಿರಬೇಕು, ತಿಳಿದಿತ್ತು. ಭಾಗವತ ಜಾಗಟೆಗೆ ಸಣ್ಣಕೆ ಎರಡು ಬಾರಿ ಸದ್ದು ಮಾಡಿದರೆ ಅರ್ಥ ಮುಂದುವರಿಸಬೇಕೆಂಬ ಸೂಚನೆ. ರಥಕ್ಕೆ ಬಾರಿಸಿದರೆ ಪರದೆಯವರು ಬರಬೇಕು, ಮದ್ದಳೆಯಲ್ಲಿ 'ಧೋಂ' ನುಡಿತ ಕೊಟ್ಟರೆ ಅದು

ಚೆಂಡೆಯವರಿಗೆ ಸೂಚನೆ. ಇದೆಲ್ಲಾ ಪಾಲಿಸಿದಾಗಲೇ ಮೇಳವಾಗುತ್ತದೆ.

* ಹಿಂದೆ ತಾಳಮದ್ದಳೆಗಳಲ್ಲಿ ಪದ್ಯಗಳನ್ನು 'ಟಿಕ್' ಮಾಡುವ ಸಂಪ್ರದಾಯವಿಲ್ಲ. ಅರ್ಥದಾರಿಗೆ ಜನಮನ್ನಣೆ ಬಂದಾಗ ಅವರ ಮಾತಿಗೆ ಬೆಲೆ ಬಂತು. ಭಾಗವತನ ಸ್ಥಾನಕ್ಕೆ ಇಳಿಲೆಕ್ಕವಾಯಿತು.

* ಪ್ರಸಂಗ ಹೊಂದಿಕೊಂಡು ವೇಷಧಾರಿ ಎರಡೆರಡು ವೇಷಗಳನ್ನು ಮಾಡಲೇಬೇಕು. ಉದಾ: ದೇವಿ ಮಹಾತ್ಮೆ ಪ್ರಸಂಗವಾದರೆ 'ಮಧು-ಕೈಟಭ' ಪಾತ್ರ ನಿರ್ವಹಿಸಿದವರು, ರಕ್ತಬೀಜ ಮತ್ತು ಧೂಮ್ರಾಕ್ಷ ಪಾತ್ರವನ್ನು ನಿರ್ವಹಿಸಬೇಕು. 'ತ್ರಿಜನ್ಮ ಮೋಕ್ಷ' ಪ್ರಸಂಗವಾದರೆ ಹಿರಣ್ಯಾಕ್ಷ ಮಾಡಿದ ಕಲಾವಿದ 'ಶಿಶುಪಾಲ' ಪಾತ್ರ ಮಾಡಬೇಕಿತ್ತು. ಈಗ ಎರಡು ವೇಷ ಬರೆದರೆ ಕಲಾವಿದನ ಮುಖ ಬಿಗುವಾಗುತ್ತದೆ.

* ಭಾಗವತನನ್ನು ಹೊಂದಿಕೊಂಡೇ ರಂಗದ ಎಲ್ಲಾ ಪ್ರಕ್ರಿಯೆಗಳು ನಡೆಯಬೇಕು. ಆಟ ಸಮಯಕ್ಕೆ ಮುಗಿಯದಿದ್ದರೆ ಭಾಗವತನ ಮೇಲೆ ದೂರು. ಬೇಗ ಮುಗಿದರೂ ಭಾಗವತನೇ ಹೊಣೆ.

* ಗಾನವೈಭವಗಳು ಮಿತಿಯಲ್ಲಿದ್ದರೆ ಚೆನ್ನ. ಒಂದೊಂದು ರಸವನ್ನು ಹಿಡಿದು ಹೇಳುವ ಪದ್ಯಗಳು ರಸಾಭಿವ್ಯಕ್ತಿಗೆ ಪೂರಕ. ಅತಿರೇಕವಾದರೆ ಹೋಯಿತು. ಹಾಡುವಾಗ ರಸಕ್ಕೊಂದು ಆಯುಷ್ಯವಿರುತ್ತದೆ! ಅದರೊಳಗೆ ಪದ್ಯ ಮುಗಿಯಬೇಕು. ಆಗ ಕೇಳಲು ಇಂಪು. 'ಇನ್ನೂ ಬೇಕು ಅನ್ನುವಾಗ ಮುಗಿಯಬೇಕು'!

* ಅಭಿಮಾನಿಗಳು ಹಿಂದೆಯೂ ಇದ್ದರು, ಈಗಲೂ ಇದ್ದಾರೆ. ಹಿಂದೆ ಆಟ ಮುಗಿದ ಮೇಲೆ ಅಭಿಮಾನಿಗಳ ವಿಮರ್ಶೆ, ಹೊಗಳಿಕೆ. ಮಧ್ಯೆ ಮಧ್ಯೆ ಶಿಳ್ಳೆ, ಚಪ್ಪಾಳೆಗಳಿಲ್ಲ. ತನಗೆ ರಸಭಂಗವಾಗುತ್ತದೆ ಎನ್ನುವುದು ಪ್ರೇಕ್ಷಕನಿಗೆ ಗೊತ್ತಿತ್ತು.

* ಒಂದೊಂದು ಮೇಳದಲ್ಲಿ ಮೂರ್ನಾಲ್ಕು ಭಾಗವತರು. ಅವರವರ ಪಾಳಿಯ ಬಳಿಕ ಹೊರಟು ಹೋಗುತ್ತಾರೆ. ಕೊನೆಯಲ್ಲಿ ಕುಳಿತುಕೊಳ್ಳುವ ಭಾಗವತನಿಗೆ ರಂಗದಲ್ಲಿ ಅಸೌಖ್ಯ ಬಾಧಿಸಿತು ಎಂದಾರೆ ಸಹ ಭಾಗವತರಿಲ್ಲದೆ ಆಟ ನಿಲ್ಲುವ ಪರಿಸ್ಥಿತಿ!

* ಕಾಲಪ್ರಮಾಣದ ಭಾಗವತಿಕೆ ಕಡಿಮೆಯಾಗಿದೆ. ಮೊದಲು ಕುಳಿತ ಭಾಗವತ ಆರಭಿ, ಮೋಹನ, ಹಂಸಧ್ವನಿ ರಾಗಗಳನ್ನು ಹಾಕಿ ಪದ್ಯ ಹೇಳಿ ಹೋಗಿರುತ್ತಾರೆ. ನಂತರ ಬಂದವರು ಯಾವ ರಾಗದಲ್ಲಿ ಹಾಡಬೇಕು? ರಾಗಗಳ ಬಳಕೆಗೂ ಕಾಲಪ್ರಮಾಣವಿದೆ. ನಮ್ಮ ಇಚ್ಛೆಯಂತೆ ರಾಗವನ್ನು ಬಳಸುವ ಹಕ್ಕು ನಮಗಿಲ್ಲ.

* ಮೊದಲೆಲ್ಲಾ ಸಂಭಾವನೆ ಕಡಿಮೆಯಿತ್ತು. ಆದರೆ ತೃಪ್ತಿಯಿರುತ್ತಿತ್ತು. ಈಗ ಸಂಭಾವನೆ ಮಿತಿಮೀರಿದೆ. ತೃಪ್ತಿ, ರಂಗಸುಖವಿಲ್ಲ. ತೃಪ್ತಿ ಯಾರಿಗೂ ಬೇಕಾಗಿಲ್ಲ!

* 'ಯಕ್ಷಗಾನವನ್ನು ಬಿಟ್ಟು ನಾನಿಲ್ಲ. ನನ್ನ ಬದುಕಿಗೆ ಯಕ್ಷಗಾನ ನೆರವಾಗಿದೆ. ಬದುಕನ್ನು ಆಧರಿಸಿದೆ. ತೃಪ್ತಿಯಾಗಿದ್ದೇನೆ.' ರಂಗವಿಂದು ಹಲವು ಪಲ್ಲಟಗಳಿಗೆ ಒಳಗಾಗಿರುವಾಗ ಈ ಕಾಲಕ್ಕೆ ನನಗೆ ಪ್ರಾಯ ಆದುದು ನನ್ನ ಪುಣ್ಯ!

ತಂದೆಯೇ ಗುರು

ಮುರಳಿಕೃಷ್ಣ ಶಾಸ್ತ್ರಿ ತೆಂಕಬೈಲು,
ಅಧ್ಯಾಪಕರು
ಶ್ರೀ ರಾಮಕೃಷ್ಣ ಪ್ರೌಢಶಾಲೆ, ಹರೇಕಳ

1991–92ರ ಆಜೂಬಾಜು. ಸುಳ್ಯದ ತೆಂಕುತಿಟ್ಟು ಯಕ್ಷಗಾನ ಹಿತರಕ್ಷಣಾ ವೇದಿಕೆಯು ಪದ್ಯಾಣ ಗಣಪತಿ ಭಟ್ಟರ ಪರಂಪರೆಯ ಹಾಡುಗಾರಿಕೆಯ ಧ್ವನಿಸುರುಳಿ ಹೊರತಂದಿತ್ತು. ಪದ್ಯಾಣರ ಭಾಗವತಿಕೆಯ ಮೋಹಕ ಸ್ವರವು ಆಕರ್ಷಿಸಿತ್ತು. ಆ ಧ್ವನಿಸುರುಳಿಯನ್ನು ಕೇಳಿದಷ್ಟೂ ಉತ್ಸಾಹ ಹೆಚ್ಚಾಗುತ್ತಿತ್ತು. ಊರಿನ ಸುತ್ತಮುತ್ತ ಅವರಿದ್ದ ಮೇಳ ಟೆಂಟ್ ಊರಿದಾಗಲೆಲ್ಲಾ ಆಟಕ್ಕೆ ಖಾಯಂ ಹೋಗುತ್ತಿದ್ದೆ. ಅವರ ಪದ್ಯಗಳನ್ನು ಅನುಭವಿಸುತ್ತಿದ್ದೆ. ಪದ್ಯಾಣರ ಹಾಡನ್ನು ಕೇಳುತ್ತಾ ಕೇಳುತ್ತಾ ಭಾಗವತಿಕೆ ಕಲಿಯಬೇಕೆಂಬ ತುಡಿತವು ಮನದ ಮೂಲೆಯಲ್ಲಿ ಬೀಜಾಂಕುರ ಮಾಡಿತ್ತು.

1992. ಬಿಎಸ್ಸಿ ಪದವಿ ಮುಗಿಸಿದ್ದೆ. ಆ ವರುಷವೇ ತಂದೆಯವರಿಂದ ಭಾಗವತಿಕೆಗೆ ಶ್ರೀಕಾರ. ಪೂರ್ವರಂಗದ ಅಭ್ಯಾಸ. ಅಂದಂದಿನ ಪಾಠವನ್ನು ಅಂದಂದೇ ಒಪ್ಪಿಸುತ್ತಿದ್ದೆ. ಕೆಲವೇ ದಿನಗಳಲ್ಲಿ ಪ್ರಸಂಗದ ಪದ್ಯಗಳನ್ನು ಹೇಳಿಸುತ್ತಿದ್ದರು. ಹೀಗೆ ತಂದೆಯೇ ಗುರುವಾಗಿ ಯಕ್ಷಗಾನದ ಬಾಲ ಪಾಠಗಳ ಮೆಟ್ಟಲು ಏರುತ್ತಿದ್ದೆ. ಒಂದೆಡೆ ಪದ್ಯಾಣರ ಹಾಡಿನ ಮೋಹಕ ಗುಂಗು, ಮತ್ತೊಂದೆಡೆ ತಂದೆಯವರ ಭಾಗವತಿಕೆಯ ಸೊಗಸುಗಾರಿಕೆಗಳು ನನ್ನೊಳಗೆ 'ಭಾಗವತ'ನೊಬ್ಬನನ್ನು ಹುಟ್ಟುಹಾಕಿತ್ತು.

ಕನ್ಯಾನದ ಶ್ರೀ ಗುರುದೇವ ಕಲ್ಯಾಣ ಮಂಟಪದಲ್ಲಿ 'ಪಂಚವಟಿ' ಪ್ರಸಂಗದ ತಾಳಮದ್ದಳೆ. ದೇವಕಾನ ಕೃಷ್ಣ ಭಟ್ಟರ ಆಯೋಜನೆ. ಆ ತಾಳಮದ್ದಳೆಯಲ್ಲಿ ಪದ್ಯ ಹೇಳಲು ಅವಕಾಶ ಸಿಕ್ಕಿತ್ತು. ಕಿರಿಯನಾದ ನನ್ನನ್ನು ಹಲವರು ಬೆನ್ನುತಟ್ಟಿದ್ದರು.

ದೇವಕಾನದವರು ಮತ್ತು ಸಬ್ಬಣಕೋಡಿ ರಾಮ ಭಟ್ಟರು ಪ್ರೋತ್ಸಾಹ ನೀಡಿದರು. ಬೆಳೆಯುವ ಎಳೆಯ ಸಿರಿಗೆ ನೀರೆರೆದು ಪೋಷಿಸಿದರು.

ಆಗ ತಂದೆಯವರು ಹವ್ಯಾಸಿ ಕ್ಷೇತ್ರದಲ್ಲಿ ಖ್ಯಾತರಾಗಿದ್ದರು. ದಿನವೂ ಆಟ. ನನ್ನನ್ನೂ ಜತೆಗೆ ಕರೆದೊಯ್ಯುತ್ತಿದ್ದರು. ಅವರು ಭಾಗವತಿಕೆ ಮಾಡುತ್ತಿದ್ದಾಗ ನಾನು ಚಕ್ರತಾಳ ಬಾರಿಸುತ್ತಿದ್ದೆ. ಪ್ರಸಂಗದ ನಡೆ, ತಾಳ, ಯಾವ ಸಂದರ್ಭಕ್ಕೆ ಯಾವ ರಾಗ, ರಂಗನಡೆಗಳ ಸೂಕ್ಷ್ಮಗಳನ್ನು ತಿಳಿಯುವುದಕ್ಕೆ, ಕಲಿಯುವುದಕ್ಕೆ ಸಾಧ್ಯವಾಯಿತು. 'ದಕ್ಷಾಧ್ವರ, ಕಂಸವಧೆ, ದೇವಿಮಹಾತ್ಮೆ, ಅತಿಕಾಯ-ಇಂದ್ರಜಿತು ಕಾಳಗ, ಕರ್ಣಪರ್ವ..' ಮೊದಲಾದ ಪ್ರಸಂಗಗಳ ಪದ್ಯಗಳ ನಡೆಗಳು, ಲಯಗಳೂ ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ಅಚ್ಚೊತ್ತಿವೆ.

ತಂದೆಯವರು ಪ್ರಸಂಗಗಳ ಪದ್ಯಗಳನ್ನು ಪ್ರತ್ಯೇಕವಾಗಿ ಕೈಬರಹದಲ್ಲಿ ಬರೆಯುತ್ತಿದ್ದರು. ಅದರಲ್ಲಿ ಪ್ರಸಂಗದ ಸೂಕ್ಷ್ಮ ಮಾಹಿತಿಗಳು, ಪಾತ್ರಗಳ ನಡೆಗಳ ಮಾಹಿತಿಯಿರುತ್ತಿತ್ತು. ಇದರಿಂದಾಗಿ ಮುಂದೆ ನನಗೆ ಪ್ರಸಂಗವನ್ನು ಆಡಿಸಲು ಅವರ ಪುಸ್ತಕಗಳು ಪಥ್ಯದಂತೆ ನೆರವಾಗಿತ್ತು. ಹಿರಿಯ ಮದ್ದೆಗಾರ್ ಪುಂಡಿಕಾಯಿ ಕೃಷ್ಣ ಭಟ್ಟರು (ದಿ.) ಮತ್ತು ಪೆರುವಾಯಿ ನಾರಾಯಣ ಭಟ್ಟರು ನನ್ನ ತಾಳ, ಲಯಗಳನ್ನು ತಿದ್ದಿದ ಗುರುಸದೃಶರು.

ಭಾಗವತಿಕೆಯಲ್ಲಿ ಪ್ರತ್ಯೇಕವಾದ ಛಾಪನ್ನು ಊರಿದ ತಂದೆಯವರ ಖ್ಯಾತಿಗೆ ಹೆಮ್ಮೆ ಪಟ್ಟಿದ್ದೇನೆ. ಅವರಂತೆ ಅಲ್ಲದಿದ್ದರೂ ಅವರ ಹಾದಿಯಲ್ಲಿ ಯಥಾಮತ್ ಕ್ರಮಿಸುತ್ತಿದ್ದೇನೆ. ●

ಮುರಳೀಕೃಷ್ಣ ಕುಟುಂಬ : ಶ್ರೀಶ (ಮಗ), ಮುರಳೀ, ವಿದ್ಯಾ, ರಶ್ಮೀ (ಮಗಳು)

ಆಶ್ಚರ್ಯದ ಮಧ್ಯೆ ಮಿಂಚಿದ ಭಾಗವತಿಕೆ

ಸುಮಾರು ನಾಲ್ಕೂವರೆ ದಶಕದ ಹಿಂದಿನ ನೆನಪು. ಮಿತ್ತನಡ್ಕದಲ್ಲಿ ಕುಂಡಾವು ಮೇಳದ ಆಟ. ನಾನು ಮಾಂಬಾಡಿ ನಾರಾಯಣ ಭಾಗವತರಲ್ಲಿ ಕಲಿತ ವರುಷ. ಅಂದಿನ ಆಟಕ್ಕೆ ನೆಲದಲ್ಲಿ ಕುಳಿತ ಪ್ರೇಕ್ಷಕರಲ್ಲಿ ನಾನೂ ಒಬ್ಬ. ಅಂದು ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿಗಳ ಭಾಗವತಿಕೆ.

ಶಾಸ್ತ್ರಿಗಳ 'ಮಾಯಗಾರನು ನೀನೆ..' ಎನ್ನುವ ನಾಟಿ ರಾಗದ ಪದ್ಯದ ಸೊಗಸಿಗೆ ದಿಗಿಲುಗೊಂಡಿದ್ದೆ. "ಇಷ್ಟು ಚಂದ ಹೇಳ್ಳೆ ಆವುತ್ತಾ." ಅಂತಲೂ ಉದ್ಗರಿಸಿದ್ದೆ. ಎಲ್ಲಾ ಹಿರಿಯ ಭಾಗವತರ ಪದ್ಯಗಳ ಅಂದವನ್ನು ಸವಿದಿದ್ದೆ. ಆದರೆ ಶಾಸ್ತ್ರಿಗಳಷ್ಟು ಸುಮಧುರವಾದ ಈ ಪದ್ಯವನ್ನು ಬೇರಾರಲ್ಲೂ ಕೇಳಲಿಲ್ಲ! ಅಂದಿನಿಂದ ನಾನು ಅವರ ಅಭಿಮಾನಿಯಾದೆ.

ದಾಮೋದರ ಮಂಡೆಚ್ಚರು, ಅಗರಿ ಶ್ರೀನಿವಾಸ ಭಾಗವತರು, ಕಡತೋಕ ಮಂಜುನಾಥ ಭಾಗವತರು, ಬಲಿಪ ನಾರಾಯಣ ಭಾಗವತರು.. ಹೀಗೆ ಉದ್ದಾಮ ಭಾಗವತರುಗಳ ಮಧ್ಯೆಯೂ ತೆಂಕಬೈಲು ಅವರ ಪದ್ಯಗಳು ಮಿಂಚುತ್ತಿದ್ದುವು. ಮೋಹಕ ಸ್ವರ. ಅವರ 'ಹಿಂದೋಳ, ಮಧ್ಯಮಾವತಿ' ರಾಗಗಳ ಹಾಡುಗಳನ್ನು ಕೇಳುವುದೇ ಆನಂದ. ಯಾರದ್ದೇ ಅನುಕರಣೆಯಿಲ್ಲದ ಸ್ವ-ಸ್ಥಾಪಿತ ಶೈಲಿ.

– ಪದ್ಯಾಣ ಗಣಪತಿ ಭಟ್,
ಭಾಗವತ

'ಕೊಂಡಾಟ'ದ ಅನುಭವ

"ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಜನಮಾನಸದಲ್ಲಿ ನೆಲೆಯಾಗಿರುವ ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿಯವರಿಗೆ ಅವಕಾಶ, ಪ್ರಚಾರಗಳು ದೊರಕಲಿಲ್ಲ. ಕೇಳುಗರ ಮನದಲ್ಲಿ 'ಹಿತವಾಗಿ ಗಿರಕಿ ಹೊಡೆಯುವ' ಅಪೂರ್ವ ಕಲೆಗಾರಿಕೆ ಹೊಂದಿದ ಇವರ ಕಂಠದಲ್ಲಿ ಮೂಡಿ ಬಂದ ದೇವಿಮಹಾತ್ಮೆಯ 'ನೋಡಿದನು ಕಲಿ ರಕ್ತಬೀಜನು...", ರಾವಣ ವಧೆ ಪ್ರಸಂಗದ 'ಕಂಡನು ದಶವದನ...', ದಕ್ಷಾಧ್ವರದ 'ಯಾತಕೆ ಬಂದೆನು ತಾನೀ ಪಾತಕಿ ಮಾಡುವ..', ಜಲಂಧರ ಕಾಳಗದ 'ಕೇಳು ಶ್ರೀರಮೆ ಕರುಣ ಸಾಗರೆ..', ಕರ್ಣಪರ್ವದ 'ಭಾನುಸುತ ರಥವಿಳಿದು.." ಮುಂತಾದ ಪದಗಳು ಮತ್ತೆ ಮತ್ತೆ ಕೇಳುವಂತೆ ಮಾಡಿ ತಲೆಯಲ್ಲಿ ಹಿತವಾಗಿ ಸುತ್ತುತ್ತಾ, ಬಾಯಿಯಲ್ಲಿ ಗುನುಗುನಿಸುತ್ತಾ 'ಕೊಂಡಾಟದ' ಅನುಭವವನ್ನು ನೀಡುತ್ತದೆ.

('ಬಯಲಾಟ' ಬ್ಲಾಗ್‌ನಿಂದ ಆಯ್ದ ಭಾಗ.)

ನೆಚ್ಚಿನ ಗುರು

ತೆಂಕಬೈಲು ಶಾಸ್ತ್ರಿಗಳು ಯಕ್ಷಗಾನದಲ್ಲಿ ವೃತ್ತಿಯಾಗಿಯೂ, ಹವ್ಯಾಸಿಯಾಗಿಯೂ ಮಿಂಚಿದ ಭಾಗವತರು. ಈಗಲೂ ಕೂಡಾ. ನನಗೆ ತೆಂಕಬೈಲು ಅಂದಾಗ ಹಿಮ್ಮೇಳ, ಮುಮ್ಮೇಳ ಎಲ್ಲದರಲ್ಲಿಯೂ ಒಂದು ರೀತಿಯ ಭಯ, ಭಕ್ತಿ. ಕಾರಣ, ಅವರಲ್ಲಿರುವ ಪ್ರಸಂಗ ನಡೆ, ಶಿಸ್ತುಬದ್ಧತೆ, ಶ್ರುತಿ–ತಾಳ–ಲಯಗಳಲ್ಲಿ ಖಚಿತತೆ.

ಅವರ ಅನುಭವ ಅಪಾರ. ಮಾಂಬಾಡಿ ಗುರು ಪರಂಪರೆ. ಓರ್ವ ಕಲಾವಿದ ಹಿಮ್ಮೇಳ, ಮುಮ್ಮೇಳಗಳಲ್ಲಿ ಅನುಭವವನ್ನು ಪಡೆದರೆ ಅಂತಹ ಕಲಾವಿದ ಪರಿಪೂರ್ಣ. ಜತೆಗೆ ನಾಟ್ಯ, ಸಂಗೀತ, ವಾದ್ಯ – ಇವು ಮೂರೂ ಅತ್ಯಗತ್ಯ. ಇವೆಲ್ಲವನ್ನೂ ಅರಗಿಸಿಕೊಂಡವರು ಶಾಸ್ತ್ರಿಗಳು. ಒಳ್ಳೆಯ ಗುರುಗಳಿಗೆ ನಾನು ಪ್ರೀತಿಯ ಶಿಷ್ಯ ಎನ್ನಲು ಅಭಿಮಾನವಾಗುತ್ತದೆ.

1984–85ನೇ ಇಸವಿ. ಮಾನ್ಯದಲ್ಲಿ ನಡೆಯುತ್ತಿದ್ದ ಅವರ ತರಗತಿಗೆ ವಿದ್ಯಾರ್ಥಿಯಾದೆ. ಸ್ವ–ಇಚ್ಛೆ ಮತ್ತು ತಂದೆಯವರ ಪ್ರೋತ್ಸಾಹ. ತರಗತಿಯಲ್ಲಿ ನಲವತ್ತು ವಿದ್ಯಾರ್ಥಿಗಳಿದ್ದರು. ನಾನಿಂದು ಚೆಂಡೆ, ಮದ್ದಳೆಯನ್ನು ನುಡಿಸುತ್ತಿದ್ದರೆ ಅದಕ್ಕೆ ಗುರುಗಳು ಕಾರಣ.

ತರಗತಿ ಆರಂಭವಾಗುವಾಗ ನಾನು ಭಾಗವತಿಕೆ ಕಲಿಯುವ ಪಂಕ್ತಿಯಲ್ಲಿ ಕುಳಿತುಕೊಳ್ಳುತ್ತಿದ್ದೆ. ನನ್ನೊಂದಿಗೆ ಗೆಳೆಯ ಚೇನಕ್ಕೋಡು ರವಿಶಂಕರ ಇರುತ್ತಿದ್ದರು. ನನಗೆ ಹಾಗೂ ಅವರಿಗೆ ಕೊನೆಗೆ ತರಬೇತಿ. ಕೆಲವೊಮ್ಮೆ ಅಹೋರಾತ್ರಿ ನಡೆಯುತ್ತಿತ್ತು. ನಮ್ಮ ಮೇಲೆ ಗುರುಗಳಿಗೆ ವಿಶ್ವಾಸವಿತ್ತು.

ಕೆಲವೊಮ್ಮೆ ನಮ್ಮ ತರಗತಿಯ ಬಳಿಕ ನಮ್ಮ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರು ತರಬೇತಿಯ ಸಮಯದಲ್ಲಿ ಅವರ ಊಟದ ವ್ಯವಸ್ಥೆಯನ್ನು ನಾನು, ಕೆಲವೊಮ್ಮೆ ಮಾವ ಪಟ್ಟಾಜೆ ವೆಂಕಟ್ರಮಣ ಭಟ್ಟರು (ದಿ.) ನಿರ್ವಹಿಸುತ್ತಿದ್ದೆವು.

ನಾನು ಚೆಂಡೆ, ಮದ್ದಳೆಯಲ್ಲಿ ಬಹುಶಃ ಅವರ ಪ್ರಥಮ ವಿದ್ಯಾರ್ಥಿ. ಗುರುಗಳ ಪೂರ್ಣ ಅನುಗ್ರಹದಿಂದ ತೃಪ್ತನಾಗಿದ್ದೇನೆ. ಸುಬ್ರಾಯ ಸಂಪಾಜೆ, ಮೋಹನ ಭಟ್, ರವಿಶಂಕರ ಇವರೆಲ್ಲಾ ಶಾಸ್ತ್ರಿಗಳ ನೆಚ್ಚಿನ ಶಿಷ್ಯರು.

ಪದ್ಯಾಣ ಪ್ರಶಸ್ತಿಗೆ ತೆಂಕಬೈಲು ಗುರುಗಳನ್ನು ಆರಿಸಿದ್ದು ಸಂತೋಷ ತಂದಿದೆ. ಮಾಂಬಾಡಿ – ಪದ್ಯಾಣ – ತೆಂಕಬೈಲು ಈ ಮೂರು ಮನೆತನಗಳು ಯಕ್ಷಗಾನದ ಹೊಕ್ಕುಳ ಬಳ್ಳಿ.

– ಉದಯ ಕಂಬಾರು, ನೀರ್ಚಾಲು

ಬಯಲಾಟದ ಭಾಗವತ

ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿಗಳು ಬಯಲಾಟದ ಭಾಗವತರೆಂದೇ ಪ್ರಸಿದ್ಧಿ ಪಡೆದವರು. ಅಗಾಧ ಪುರಾಣ ಜ್ಞಾನವುಳ್ಳ, ವೈದಿಕ ಪರಂಪರೆಯಲ್ಲಿ ಸಾಕಷ್ಟು ಅನುಭವವುಳ್ಳವರು.

1975ನೇ ಇಸವಿಯಿಂದ ಸುಮಾರು ನಾಲ್ಕು ದಶಕಗಳ ಕಾಲ ಬಯಲಾಟಗಳಲ್ಲಿ ಶಾಸ್ತ್ರಿಗಳ ಭಾಗವತಿಕೆಯ ಸೊಬಗನ್ನು ಓರ್ವ ವೇಷಧಾರಿಯಾಗಿ ಅನುಭವಿಸಿದ್ದೇನೆ. ರಾತ್ರಿಯಿಡೀ ಆಟವಾಗುತ್ತಿದ್ದ ಕಾಲದಲ್ಲಿ ಹೆಚ್ಚಿನ ಪುರಾಣ ಪ್ರಸಂಗಗಳನ್ನು ರಂಗದಲ್ಲಿ ಮೆರೆಸುವ ಸಿದ್ಧಿಯನ್ನು ಹೊಂದಿದ್ದರು.

ನೋಟಕ ಶಾರೀರವುಳ್ಳ ಅವರ ಪದ್ಯಗಳು ಯಾವ ಕಾಲವೇ ಇರಲಿ; ಪೀಠಿಕೆಯಿಂದ ತೊಡಗಿ, ಬೆಳಗ್ಗಿನ ಜಾವದ ವರೆಗೂ ವೇಷಧಾರಿಯ ಸಾಮರ್ಥ್ಯವನ್ನು ಅರಿತು ಮೆರೆಸುತ್ತಿದ್ದರು. ದಕ್ಷಾಧ್ವರ, ಕರ್ಣಪರ್ವ, ಕೃಷ್ಣಾರ್ಜುನ, ಕಾರ್ತವೀರ್ಯ, ಮೈರಾವಣ, ಇಂದ್ರಜಿತು, ಅತಿಕಾಯ ಮುಂತಾದ 'ಗಂಡು ಪ್ರಸಂಗ'ಗಳು ಅವರ ಕಂಠಸಿರಿಯಲ್ಲೇ ಕೇಳಬೇಕು! ಸಮಯ ಪರಿಪಾಲನೆಗೆ ತುಂಬಾ ಮಹತ್ವ ಕೊಡುವ ಭಾಗವತರು. ಸಮರ್ಥ ನಿರ್ದೇಶಕ.

ದಕ್ಷಾಧ್ವರ ಪ್ರಸಂಗದ 'ನೋಡಿರಿ ದ್ವಿಜರು ಪೋಪುದನು', ಕೃಷ್ಣಾರ್ಜುನ ಕಾಳಗದ 'ಅಮ್ಮ ತಂಗಮ್ಮ ಸೌಭದ್ರೆ', ಭಾರ್ಗವ ವಿಜಯದ 'ಬಂದನೇ ಸಿರಿಯರಸ', ದೇವಿಮಹಾತ್ಮೆಯ 'ಏಣಾಂಕ ನಿಭವಕ್ತ್ರೆ'.. ಮೊದಲಾದ ಪದ್ಯಗಳಿಗೆ ಮನಸೋಲದ ವೇಷಧಾರಿ, ಪ್ರೇಕ್ಷಕ ಇಲ್ಲವೆನ್ನಬಹುದು.

ಮಾಂಬಾಡಿ ಭಾಗವತರ ಗಾನಸುಧೆಯನ್ನು ಅರಗಿಸಿಕೊಂಡ ಶಾಸ್ತ್ರಿಗಳು ಅಗರಿ ಭಾಗವತರನ್ನು ಬಹಳಷ್ಟು ಇಷ್ಟಪಟ್ಟವರು. ಆಟ ಕೂಟಗಳೆರಡರಲ್ಲೂ ತನ್ನದೇ ಛಾಪನ್ನು ರಂಗದಲ್ಲಿ ಅದ್ವಿತೀಯರಾಗಿ ಊರಿದ್ದಾರೆ. ಅವರನ್ನು 'ಬಯಲಾಟದ ಭಾಗವತ'ರೆಂದೇ ಮೆಚ್ಚಿಕೊಳ್ಳುತ್ತೇವೆ. ಅವರ ಚಿರಂಜೀವಿ ಮುರಳಿಕೃಷ್ಣ ಶಾಸ್ತ್ರಿಗಳು ತಂದೆಯವರ ಕೀರ್ತಿಯನ್ನು ಉಳಿಸಿ ಬೆಳೆಸುವಲ್ಲಿ ಸಮರ್ಥ ಭಾಗವತರಾಗಿ ಬೆಳೆದಿದ್ದಾರೆ. ಬೆಳೆಯುತ್ತಿದ್ದಾರೆ. ನೆಚ್ಚಿನ ತೆಂಕಬೈಲು ಭಾಗವತರಿಗೆ 'ಪದ್ಯಾಣ ಪ್ರಶಸ್ತಿ' ಪ್ರಾಪ್ತವಾಗುತ್ತಿರುವುದು ಖುಷಿಯ ಸಂಗತಿ.

– ಗುಂಡ್ಯಡ್ಕ ಈಶ್ವರ ಭಟ್, ಮುಣಚ

ವೇಷಧಾರಿ, ಅರ್ಥದಾರಿ

ಸೇವೆಗೆ ಕನ್ನಡಿ

ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿಯವರ ಕಲಾಯಾನದಲ್ಲಿ ಅರಸಿ ಬಂದ ಸಂಮಾನ, ಪ್ರಶಸ್ತಿಗಳು ನೂರಾರು. ಸಂಘಸಂಸ್ಥೆಗಳು, ಅಭಿಮಾನಿಗಳು ಶಾಸ್ತ್ರಿಗಳ ಹಿರಿತನ, ಅನುಭವಗಳಿಗೆ ಗೌರವ ನೀಡಿದ್ದಾರೆ. ಅವುಗಳಲ್ಲಿ ಆಯ್ದ ಕೆಲವು ಸಂಸ್ಥೆಗಳ ಹೆಸರುಗಳು :

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಬೆಂಗಳೂರು
ಡಾ.ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನದ ಪ್ರಶಸ್ತಿ
ಡಾ.ಶೇಣಿ ಶತಮಾನೋತ್ಸವ ಪ್ರಶಸ್ತಿ – ಸಂಪಾಜೆ
ಕುರಿಯ ವಿಠಲ ಶಾಸ್ತ್ರಿ ಪ್ರತಿಷ್ಠಾನ, ಉಜಿರೆ – ಕುರಿಯ ಪ್ರಶಸ್ತಿ
ಕುರಿಯ ವಿಠಲ ಶಾಸ್ತ್ರಿ ಜನ್ಮಶತಮಾನೋತ್ಸವ ಪ್ರಶಸ್ತಿ
ಶ್ರೀ ವೀರಾಂಜನೇಯ ಸ್ವಾಮಿ ಯಕ್ಷ ಕಲಾ ಪ್ರತಿಷ್ಠಾನ – ದಿವಾಣ ಪ್ರಶಸ್ತಿ
ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ
ಕಲಾರಂಗ ಉಡುಪಿ
ಪಟ್ಟಾಜೆ ಪ್ರಶಸ್ತಿ
ಯಕ್ಷಸಿಂಧೂರ ಪ್ರತಿಷ್ಠಾನ, ವಿಟ್ಲ
ಪಡ್ರೆ ಚಂದು ಸ್ಮಾರಕ ನಾಟ್ಯ ತರಬೇತಿ ಕೇಂದ್ರ, ಪೆರ್ಲ
ಜಿಲ್ಲಾ ಮಟ್ಟದ ಜಾನಪದ ಕಲಾ ಮೇಳ

ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ, ಹೊರನಾಡು ● ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ● ಯಕ್ಷಮಿತ್ರರು ಪಡ್ರೆ ● ಇಷುಧಿ ಬೆಂಗಳೂರು ಯಕ್ಷಕಲಾ ಭಾರತೀ ಮಕ್ಕಳ ಯಕ್ಷಗಾನ ಕೇಂದ್ರ, ಮಂಗಲ್ಪಾಡಿ ● ಸಾಮ್ರಾಟ್ (ರಿ) ಮಾನ್ಯ ● ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಸಂಘ ಪಾಂಡೇಶ್ವರ ● ಶ್ರೀ ಸದಾಶಿವ ಪ್ರಸಾದಿತ ಯಕ್ಷ ಬಳಗ ಸಾಲೆತ್ತೂರು ● ಶ್ರೀ ಸುಬ್ರಹ್ಮಣ್ಯೇಶ್ವರ ಯಕ್ಷಗಾನ ಕಲಾ ಸಂಘ, ವಗೆನಾಡು ● ಹವ್ಯಾಸಿ ಬಳಗ ಕದ್ರಿ ● ಶ್ರೀ ಕೃಷ್ಣ ಜನ್ಮದಿನೋತ್ಸವ ಸಮಿತಿ ಕದ್ರಿ ● ಶ್ರೀ ಅಯ್ಯಪ್ಪ ಸ್ವಾಮಿ ಯಕ್ಷಗಾನ ಕಲಾ ಸಂಘ ಮಾವಿನಕಟ್ಟೆ ● ಶ್ರೀ ದುರ್ಗಾಪರಮೇಶ್ವರ ಯಕ್ಷಗಾನ ಯುವಕ ಮಂಡಲ, ಕಿನ್ಯ ● ಶ್ರೀ ವಾಗ್ದೇವಿ ಯಕ್ಷಗಾನ ಕಲಾ ಸಂಘ ನಲ್ಕ ● ಶ್ರೀ ಚಾಮುಂಡೇಶ್ವರೀ ಮಂದಿರ ಪಾವೂರು-ಪೊಯ್ಯೆ ● ಯಕ್ಷದೀಪ ಕೋಳ್ಯೂರು ● ಕೃಷ್ಣಾ ಫ್ರೆಂಡ್ಸ್ ಕ್ಲಬ್ ಕೋಳ್ಯೂರು ಯಕ್ಷಬಳಗ ಹೊಸಂಗಡಿ ● ಸಂಸ್ಕಾರ ಭಾರತೀ ಬೆಂಗಳೂರು ● ಯಕ್ಷಮಿತ್ರರು ಕುಡುಪು ● ಶ್ರೀ ಮೂಕಾಂಬಿಕಾ ಯಕ್ಷಗಾನ ಕಲಾ ಸಂಘ ಮುಂಡೋಡು ● ಶ್ರೀ ಸುಬ್ರಹ್ಮಣ್ಯೇಶ್ವರ ಯಕ್ಷಗಾನ ಕಲಾ ಸಂಘ ಕೊಲ್ಲಂಗಾನ ● ಶ್ರೀ ನವೋದಯ ಸ್ವ-ಸಹಾಯ ಸಂಘ, ಮಿತ್ತನಡ್ಕ ● ಮಂಗಳೂರು ಹವ್ಯಕ ಸಭಾ ● ಬೆನಕ ಯಕ್ಷ ಕಲಾ ವೇದಿಕೆ, ಪೈವಳಿಕೆ ● ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನ ಬೆಂಗಳೂರು ● ಮಿತ್ರ ಯುವಕ ಮಂಡಲ, ತಂಬತ್ತಾಜೆ ● ಪದ್ಯಾಣ ಗಣಪತಿ ಭಟ್ಟರ ಅಭಿನಂದನೆ - ಪದಯಾನ - ಗೌರವ ● ಸರಯೂ ಬಾಲ ಕಲಾ ವೃಂದ ಮಂಗಳೂರು ....

ಇಳಿವಯಸ್ಸಿಗೆ ಆಸರೆ ಜಯಲಕ್ಷ್ಮೀ ಅಮ್ಮ

XV

ಪದ್ಯಾಣ ಪ್ರಶಸ್ತಿ ಸಮಿತಿ

ಅಂಚೆ : ಕಲ್ಮಡ್ಕ, ಸುಳ್ಯ ತಾಲೂಕು (ದ.ಕ.)

26–11–2018

ಸ್ಥಳ : ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಭಾಭವನ

ಪದ್ಯಾಣ ಮನೆತನದ ಹಿರಿಯ – ಪುಟ್ಟು ನಾರಾಯಣ ಭಾಗವತರ ಸ್ಮೃತಿಯಲ್ಲಿ

ಪದ್ಯಾಣ ಪ್ರಶಸ್ತಿ

ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿ – ಇವರಿಗೆ

ಇವರು –

ತೆಂಕುತಿಟ್ಟಿನ ಹಿರಿಯ ಭಾಗವತ. ಪರಂಪರೆಯ ಸಾಕ್ಷಿ ಪ್ರಜ್ಞೆ, ಭಾಗವತಿಕೆಯಲ್ಲಿ ಸ್ವ–ಶೈಲಿಯ ಛಾಪು. ಬೆರಗಿನ ಶಾರೀರ. ಅನುಸರಿಸಲಾಗದ, ಅನುಕರಿಸಲಾಗದ ಬಿಗಿ. ಅನುಭವದಿಂದ ಮಾಗಿದ ಬೌದ್ಧಿಕತೆ. ನೂರಾರು ಶಿಷ್ಯರನ್ನು ರೂಪಿಸಿದ ಗುರು.

ಇವರಿಗೆ –

ಬದುಕೇ ಯಕ್ಷಗಾನ. ಯಕ್ಷಗಾನವೇ ಬದುಕು. ಹಲವು ಪ್ರಸಂಗಗಳು ಕಂಠಸ್ಥ. ರಂಗದ ನಿರ್ದೇಶಕ. ರಂಗಭಾಷೆಯ ಅನುಷ್ಠಾನದತ್ತ ಬಿಗು ನಿಲುವು. ಪೌರಾಣಿಕ ಪ್ರಸಂಗಗಳ ಪದ್ಯಗಳಿಗೆ ಮೋಹಕ ಧ್ವನಿಯ ಸ್ಪರ್ಶ. ವಿವಿಧ ಮೇಳಗಳಲ್ಲಿ ತಿರುಗಾಟ. ಹವ್ಯಾಸಿ ಆಟ–ಕೂಟಗಳಲ್ಲಿ ವ್ಯವಸಾಯ.

ಇವರಿಂದ –

ಪರಂಪರೆಯ ಉಳಿವು. ಪ್ರೌಢ ಪ್ರಸಂಗಗಳ ರಚನೆ. ರಂಗತಂತ್ರಗಳ ಬಳಕೆಯಲ್ಲಿ ರಾಜಿಯಾಗದ ನಿಲುವು. ನೇರ ನಡೆ, ನುಡಿ. ಪರಿಪಕ್ವಗೊಂಡ ವ್ಯಕ್ತಿತ್ವ

ಈ ಎಲ್ಲಾ ಗುಣಗಳ ನಿಮ್ಮ ಕಲಾ ಬದುಕಿನ ಗಾನ–ಯಾನಕ್ಕೆ ಪದ್ಯಾಣ ಕುಟುಂಬದ ಗೌರವ. ಬದುಕಿನ ಉತ್ತರಾಪಥವು ಭಾಗ್ಯವಾಗಲಿ ಎಂಬ ಶುಭ ಹಾರೈಕೆಯೊಂದಿಗೆ ಈ ಪ್ರಶಸ್ತಿಯನ್ನು ಪ್ರದಾನಿಸುತ್ತಿದ್ದೇವೆ.

ಸ್ವಸ್ತಿಕ್ ಪದ್ಯಾಣ ಕಾರ್ಯದರ್ಶಿ	**ಡಾ.ಟಿ.ಶ್ಯಾಮ ಭಟ್** ಗೌರವಾಧ್ಯಕ್ಷರು	**ಪದ್ಯಾಣ ಗೋಪಾಲಕೃಷ್ಣ ಭಟ್** ಅಧ್ಯಕ್ಷರು

ಸಮಿತಿಯ ಸರ್ವ ಸದಸ್ಯರು

ಪದ್ಯಾಣ ಪ್ರಶಸ್ತಿ 2016

ಅಗರಿ ರಘುರಾಮ ಭಾಗವತರಿಗೆ

ಪ್ರಶಸ್ತಿ ಪ್ರದಾನ : 5-6-2016

ಪದ್ಯಾಣ ಪ್ರಶಸ್ತಿ 2017

ಪರಮಪೂಜ್ಯ ಶ್ರೀ ಶ್ರೀ ಕೇಶವಾನಂದ ಭಾರತೀ ಶ್ರೀ ಪಾದಂಗಳವರ ದಿವ್ಯ ಉಪಸ್ಥಿತಿ ಮತ್ತು ಆಶೀರ್ವಚನ.

ಬಲಿಪ ನಾರಾಯಣ ಭಾಗವತರಿಗೆ ಪ್ರಶಸ್ತಿ ಪ್ರದಾನ : 10-12-2017

ಒ

ಏಕಚಕ್ರ ವೀರ ವಿಜಯ

ಕಥಾ ರಚನೆ : ಶ್ರೀ ಬಾಲಕೃಷ್ಣ ಏಳ್ಕಾನ
ಪದ್ಯ ರಚನೆ : ಶ್ರೀ ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿ

1. ದೇವೇಂದ್ರ
2. ಅಗ್ನಿ
3. ವರುಣ
4. ವಾಯು
5. ಕುಬೇರ
6. ಧ್ವಜಾಸುರ
7. ಜಯಾಸುರ
8. ವಿಜಯಾಸುರ
9. ದೇವದೂತ
10. ವಿಷ್ಣು
11. ಬ್ರಹ್ಮ
12. ಈಶ್ವರ
13. ಷಣ್ಮುಖ
14. ವೀರಭದ್ರ
15. ನಂದಿ
16. ವೃದ್ಧ ಬ್ರಾಹ್ಮಣ
17. ಲಕ್ಷ್ಮೀ
18. ಕುದುರೆಗಳು (2)
19. ಋಷಿ (ದೇವದತ್ತ)
20. ನಾರದ
21. ಏಕಚಕ್ರ

ಕಥಾ ಸಾರಾಂಶ :

ರಕ್ತಪುರ ಎಂಬ ಪುರಕ್ಕೆ ಧ್ವಜಾಸುರನೆಂಬ ರಾಕ್ಷಸ ಅಧಿಪತಿ. ಅವನಿಗೆ ಇಬ್ಬರು ಮಕ್ಕಳು. ದೊಡ್ಡವ ಜಯಾಸುರ, ಚಿಕ್ಕವ ವಿಜಯಾಸುರ. ತಮಗೆ ದೇವಲೋಕ ಸಲ್ಲಬೇಕು ಎಂದು ಆಲೋಚಿಸಿದ ಇವರು ಸೇನಾಬಲ ಸಮೇತ ದೇವಲೋಕಕ್ಕೆ ದಾಳಿ ಮಾಡುತ್ತಾನೆ. ಸಮರದಲ್ಲಿ ಕೈ ಸೋತ ದೇವೇಂದ್ರ ವಿಷ್ಣುವಿನಲ್ಲಿಗೆ ಹೋಗಿ ನಡೆದ ವಿಷಯವನ್ನು ತಿಳಿಸಿ ಸುರಲೋಕವನ್ನು ಮರಳಿ ದೊರಕಿಸಿ ಕೊಡುವಂತೆ ಕೇಳಿಕೊಳ್ಳುತ್ತಾನೆ. ಒಪ್ಪಿದ ಮಹಾವಿಷ್ಣು ದೇವಲೋಕಕ್ಕೆ ಹೋಗುತ್ತಾನೆ. ತನ್ನ ಪುತ್ರರನ್ನು, ಸೈನಿಕರನ್ನು ಪುರಕ್ಕೆ ಕಳುಹಿಸಿದ ಧ್ವಜಾಸುರ ದೇವಲೋಕದಲ್ಲಿಯೇ ಇರುತ್ತಾನೆ. ಅವನನ್ನು ವಧಿಸಿದ ವಿಷ್ಣು ಪುನಃ ದೇವಲೋಕವನ್ನು ದೇವೇಂದ್ರನಿಗೆ ಒಪ್ಪಿಸುತ್ತಾನೆ.

ತಂದೆ ಸತ್ತ ವಿಷಯವನ್ನು ತಿಳಿದ ಸಹೋದರರು ತಂದೆಯ ಮರಣೋತ್ತರ ಪ್ರಕ್ರಿಯೆಗಳನ್ನು ಮುಗಿಸಿದರು. ಆದರೆ ಪಿತನ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ತಂದೆಯ ಸಾವಿಗೆ ಕಾರಣರಾದವರನ್ನು ಕೊಂದು ತೀರಿಸಬೇಕೆಂಬ ತೀರ್ಮಾನವನ್ನು ಮಾಡುತ್ತಾರೆ. ಅದಕ್ಕಾಗಿ ಕಾಡನ್ನು ಸೇರಿ ಬ್ರಹ್ಮನನ್ನು ಕುರಿತು ಘೋರ ತಪಸ್ಸನ್ನು ಮಾಡಿ ಅವನನ್ನು ಒಲಿಸಿಕೊಳ್ಳುತ್ತಾರೆ. ಯಾರಿಂದಲೂ ಯಾವುದರಿಂದಲೂ ಮರಣ ಬಾರದಂತೆ, ಸೋಲು ಇಲ್ಲದಂತೆ ಜಯಿಸುವ ಆಯುಧಗಳನ್ನು ಹಾಗೂ ಮನೋ ವೇಗದಲ್ಲಿ ಸಂಚರಿಸುವ ಎರಡು ಅಶ್ವಗಳನ್ನು ವರ ರೂಪದಲ್ಲಿ ಕೇಳುತ್ತಾರೆ. ಅದನ್ನು ದಯಪಾಲಿಸಿದ ಬ್ರಹ್ಮ ಮರಣವೇ ಇಲ್ಲದವರು ಯಾರೂ ಇಲ್ಲ. ಹಾಗಿರುವಾಗ ನಿಮಗೂ ಮರಣವಿದೆ. ಎರಡು ಅಶ್ವಗಳ ಸಮಾಗಮದಿಂದ ಹುಟ್ಟುವ ಗಂಡು ಶಿಶುವಿನಿಂದ ಮರಣ ಎಂಬ ವಿಷಯ ತಿಳಿಸಿ ಅವರನ್ನು ಹರಸಿ ಅಂತಃರ್ಧಾನನಾಗುತ್ತಾನೆ.

ವರಬಲದಿಂದ ಕೊಬ್ಬಿದ ಸಹೋದರರು ದೇವಲೋಕಕ್ಕೆ ದಾಳಿ ಮಾಡಿ ದೇವತೆಗಳನ್ನು ಸೋಲಿಸಿ ಸ್ವರ್ಗವನ್ನು ಸ್ವಾಧೀನ ಮಾಡುತ್ತಾರೆ. ಮತ್ತೆ ದೇವಲೋಕ ಕಳೆದುಕೊಂಡ ದೇವೇಂದ್ರ ಈ ಧನುಜರಿಗೆಲ್ಲ ಕುಲದೇವರು ಪರಮೇಶ್ವರ ಎಂದರಿತು ಇವರ ಕೊಬ್ಬನ್ನು ಇಳಿಸಲು ಪ್ರಭು ಪರಮೇಶ್ವರನೇ ಆಗಬೇಕೆಂದು ಅವನಲ್ಲಿ ದೂರು ಕೊಡುತ್ತಾನೆ. ಕೋಪಗೊಂಡ ಪರಶಿವ ತನ್ನ ಗಣಗಳನ್ನು ಯುದ್ಧಕ್ಕಾಗಿ ಕಳುಹಿಸುತ್ತಾನೆ. ಇದನ್ನು ನೋಡಿದ ನಾರದರು ಲೋಕಕ್ಕೆ ಇದರಿಂದ ಗಂಡಾಂತರ ಎಂದರಿತು ನಡೆಯುತ್ತಿರುವ ವಿದ್ಯಮಾನವನ್ನು ಶ್ರೀಹರಿಗೆ ತಿಳಿಸುತ್ತಾನೆ. ಮಾತ್ರವಲ್ಲ ವರಬಲದ ಕುರಿತಾಗಿಯೂ ತಿಳಿಸುತ್ತಾನೆ. ಆಗ ಶ್ರೀಹರಿ ನಾರದನೊಂದಿಗೆ ಬ್ರಹ್ಮನಲ್ಲಿಗೆ ಬರುತ್ತಾನೆ. ಬ್ರಹ್ಮನಿಂದ ವರದ ವಿಷಯ ತಿಳಿದ ಶ್ರೀಹರಿ, ಬ್ರಹ್ಮ ಮತ್ತು ನಾರದರೊಂದಿಗೆ ಕೈಲಾಸಕ್ಕೆ ಹೋಗಿ ಯುದ್ಧಕ್ಕೆ ಹೊರಟ ಈಶನಲ್ಲಿ ಈ ವಿಷಯಗಳನ್ನೆಲ್ಲ ತಿಳಿಸಿ ಯುದ್ಧಕ್ಕೆ ಹೋಗದಂತೆ ತಡೆಯುತ್ತಾರೆ. ಹಾಗಾದರೆ ಅವರಿಗೆ ಮರಣ ಹೇಗೆ ಎಂದು ಮೂವರು ಕೇಳಿದಾಗ ಶ್ರೀಹರಿ – ಅದಕ್ಕೆ ನಾಟಕವೊಂದನ್ನು ಮಾಡುತ್ತೇನೆ. ಕಾಲಕ್ಕಾಗಿ ಕಾಯೋಣ ಎಂದು ಹೇಳುತ್ತಾನೆ. ಸ್ವಸ್ಥಾನಗಳಿಗೆ ಸೇರಿಕೊಳ್ಳುತ್ತಾರೆ.

ಜನಕನನ್ನು ಕೊಂದ ಸೇಡನ್ನು ತೀರಿಸಲು ರಾಕ್ಷಸ ಸಹೋದರರು ವೈಕುಂಠವನ್ನು ಸೇರುತ್ತಾರೆ. ರಾಕ್ಷಸರು ಯುದ್ಧಕ್ಕೆ ಬರುತ್ತಾರೆ ಎಂದರಿತ ಶ್ರೀಹರಿ ತನ್ನ ವೇಷವನ್ನು ಮರೆಸಿ ವೃದ್ಧ ಬ್ರಾಹ್ಮಣನಾಗಿ ಅವರೆದುರು ಕಾಣಸಿಗುತ್ತಾನೆ. ಹರಿಯ ಬಗ್ಗೆ ಅವರು ವಿಚಾರಿಸಿದಾಗ 'ಹರಿ ಪಾಲನಾ ಕಾರ್ಯದ ನಿಮಿತ್ತ ಎಲ್ಲೋ ಹೋಗಿದ್ದಾನೆ. ಎಂದು ಬರುತ್ತಾನೋ ಗೊತ್ತಿಲ್ಲ' ಎಂದು ಅವರನ್ನು ಮರುಳು ಮಾಡುತ್ತಾನೆ. ಬಂದ ದಾರಿಗೆ ಸುಂಕವಿಲ್ಲ ಎಂದು ಹಿಂದಿರುಗುತ್ತಾರೆ.

ಮುಂದೊಂದು ದಿನ ಶ್ರೀಹರಿ ಮೃಷ್ಟಾನ್ನ ಭೋಜನವನ್ನು ಸ್ವೀಕರಿಸಿ ತೃಪ್ತನಾಗಿದ್ದ ಸಂದರ್ಭ ತನ್ನ ಮಡದಿ ಲಕ್ಷ್ಮೀಯನ್ನು ಕರೆದು ಕಾಲೊತ್ತುವಂತೆ ಹೇಳುತ್ತಾನೆ. ಲಕ್ಷ್ಮೀ ಶ್ರೀಹರಿಯ ಸೇವೆ ಮಾಡುವ ವೇಳೆಯಲ್ಲಿ ಗಂಧರ್ವನೋರ್ವ ಬಿಳಿ ಬಣ್ಣದ ಅಶ್ವವೇರಿ ಆಕಾಶಮಾರ್ಗದಲ್ಲಿ ಸಂಚರಿಸುತ್ತಾನೆ. ಆ ಅಶ್ವವನ್ನು ಕಂಡ ಲಕ್ಷ್ಮಿ ಗಂಡನ ಸೇವೆಯನ್ನು ಬಿಟ್ಟು ಅದನ್ನು ನೋಡುತ್ತಾಳೆ. ಅದರ ಅಂದವನ್ನು ವರ್ಣಿಸುತ್ತಾಳೆ. ಇದರಿಂದ ಕೋಪಗೊಂಡ ವಿಷ್ಣು ಲಕ್ಷ್ಮಿಗೆ ಕುದುರೆಯಾಗು ಎಂದು ಶಾಪ ಕೊಡುತ್ತಾನೆ. ಹಾಗೆಯೇ ಲಕ್ಷ್ಮಿ ಭೂಲೋಕದಲ್ಲಿ ಕುದುರೆಯಾಗಿ ಕಾಡಿನಲ್ಲಿ ಇರುತ್ತಾಳೆ. ಕೆಲ ಸಮಯದಲ್ಲಿ ಲಕ್ಷ್ಮಿಯಿಂದ ದೂರಗೊಂಡ ವಿಷ್ಣು ವೈಕುಂಠದಲ್ಲಿ ಇರಲು ಬೇಸರವಾಗಿ ಲಕ್ಷ್ಮಿಯನ್ನು ಅರಸಿಕೊಂಡು ಭೂಲೋಕಕ್ಕೆ ಬರುತ್ತಾನೆ. ಅಶ್ವವಾಗಿರುವ ತನ್ನ ಮಡದಿಯನ್ನು ಕಂಡು ಶ್ರೀಹರಿ ತಾನೂ ಒಂದು ಅಶ್ವವಾಗಿ ಲಕ್ಷ್ಮಿಯನ್ನು ಸೇರುತ್ತಾನೆ. ಹೀಗೆ ಆ ಅಶ್ವವು ಗರ್ಭವತಿಯಾಗಿ ಗಂಡು ಶಿಶುವನ್ನು ಪಡೆದಾಗ ನಿಜ ವೇಷ ಧರಿಸಿದರು. ತನ್ನ ಸುದರ್ಶನ ಚಕ್ರವನ್ನು ಶಿಶುವಿನ ಎದೆಯಲ್ಲಿ ಮೂಡಿಸಿ ಮಗುವನ್ನು ದೇವದತ್ತ ಎಂಬ ಋಷ್ಯಾಶ್ರಮದ ಸನಿಹ ಬಿಟ್ಟು ವೈಕುಂಠ ಸೇರುತ್ತಾರೆ. ಈ ಶಿಶುವನ್ನು ದೇವದತ್ತ ಮುನಿಗಳು ಸಾಕುತ್ತಾರೆ. ಎದೆಯಲ್ಲಿರುವ ಚಕ್ರ, ಭುಜದಲ್ಲಿ ವೀರತ್ವವನ್ನು ನೋಡಿ 'ಏಕಚಕ್ರ ವೀರ' ಎಂದು ನಾಮಕರಣ ಮಾಡುತ್ತಾರೆ. ನಾರದರಿಂದ ಈ ವಿಷಯವರಿತ ಶ್ರೀಹರಿ, ಬ್ರಹ್ಮ ಮತ್ತು ಈಶನೊಂದಿಗೆ ದೇವೇಂದ್ರನನ್ನು ಒಡಗೊಂಡು ಆಶ್ರಮಕ್ಕೆ ಬಂದು ಅವರಲ್ಲಿ ವಿಷಯವನ್ನು ತಿಳಿಸುತ್ತಾರೆ. ಸಂತೋಷಗೊಂಡ ದೇವದತ್ತ ಏಕಚಕ್ರನನ್ನು ಯುದ್ಧಕ್ಕಾಗಿ ಕಳುಹಿಸುತ್ತಾನೆ. ಜಯಾಸುರ ಮತ್ತು ವಿಜಯಾಸುರನನ್ನು ಕೊಂದ ಬಾಲಕ ದೇವಲೋಕವನ್ನು ದೇವೇಂದ್ರನಿಗೆ ಒಪ್ಪಿಸಿ ತ್ರಿಮೂರ್ತಿಗಳ ಪಾದಕ್ಕೆ ಶಿರಬಾಗುತ್ತಾನೆ. ಮುಂದಕ್ಕೆ ಆ ಆಶ್ರಮದ ಜಾಗವನ್ನು 'ಏಕಚಕ್ರ ನಗರ' ವನ್ನಾಗಿ ಮಾಡಿ ಇಲ್ಲಿನ ಅಧಿಕಾರವನ್ನು ಏಕಚಕ್ರನಿಗೆ ವಹಿಸಿಕೊಟ್ಟು ಎಲ್ಲರೂ ನಿಶ್ಚಿಂತೆಯಿಂದ ತಮ್ಮ ತಮ್ಮ ಲೋಕವನ್ನು ಸೇರಿಕೊಳ್ಳುತ್ತಾರೆ.

--*-*-*-*-*-*-*

ದೇವೇಂದ್ರನ ಒಡ್ಡೋಲಗ

ಭೈರವಿ – ಝಂಪೆತಾಳ

ಧರಣಿಪಾಲಕ ಕೇಳು। ಸುರಪಾಲನಾಕದಲಿ । ಹರುಷದಿಂದೋಲಗದಿ । ಮೆರೆಯೆ ವೈಭವದಿ॥ ವರುಣ ವಾಯು ಕುಬೇರ। ನಿಋತಿ ಮೊದಲಾದವರ । ಪರಿಪರಿಯ ಸುಮನಸರ ನೆರವಿಯೊಡಗೂಡಿ ॥ ೧ ॥

ರಂಬಾದಿ ನಾರಿಯರು । ಸಂಭ್ರಮದಿ ನರ್ತಿಸಲು । ತುಂಬಿರುವ ಸಭೆಯೊಳಗೆ ಜಂಬಾರಿ ನುಡಿದ ॥ ೨ ॥ ಕೇಳಿದಿರೆ ಸುಮನಸರೆ । ಕಮಲನಾಭನ ದಯದಿ । ಅಮಿತ ಸಂಪದವು ಎಮಗೆ ಲಭಿಸಿದುದು ॥ ಆದರಾಖಳರು ದಾಯಾದ್ಯ ಮತ್ಸರದಿಂದ ಬಾಧಿಪರು ಆಗಾಗ ಹಾದಿಯೇನಿದಕೆ ॥ ೩ ॥

ಭೈರವಿ ಅಷ್ಟತಾಳ

ಸುರನಾಥ ಲಾಲಿಸಯ್ಯ । ನಾವೆಂಬುದು ಮರೆಯ ಮಾತಲ್ಲ ಜೀಯ ॥ ದುರುಳರು ನಾಕಕ್ಕೆ ತಂದರೆಯವರನ್ನು । ತರಿದಿಕ್ಕುವೆವು ನಿಶ್ಚಯ ॥ ೧ ॥ ಸುರಧೇನು ಕಲ್ಪತರು । ಮುಂತಾಗಿಹ ಭರಿತ ಭಾಗ್ಯವ ಖಳರು। ಮರುಳರಂತಿಚ್ಚಿಸಿ । ಧುರಕ್ಕೈದು ನಮ್ಮಲ್ಲಿ ಹರಣವ ನೀಗುವರು ॥ ೨ ॥ ಸುಧೆಯನು ಸೇವಿಸಿರೆ ದೈತ್ಯೇಯರ ಕದನಕಂಜುವ ಭಟರೆ ॥ ಪದುಮನಾಭನದಯದಲಿ ಖೂಳರನು ಯಮ । ಸದನ ಕಟ್ಟದೆ ಬಿಡೆವು ॥ ೩ ॥ ಸುರರೊಳು ದ್ವೇಷದಲಿ । ಖೂಳರು ಸ್ವರವೇರುತಲಿ ॥ ಬರಲವರ ಶಿರವರಿದು ನಿಶ್ಚಯ । ನೀ ತಾಳದಿರು ಮನದೊಳು ಸಂಶಯ ॥ ೪ ॥

ಬಲುತೋಷವಾಂತೆ ನಾ ನೀವೆಂದ ನುಡಿಗೆ। ಕಲಿಗಳು ನಿಶ್ಚಯ ಸಂಗರದೊಳಗೆ॥ ಖಳರ ಭೀತಿಯು ನಮಗೆಳ್ಳಿನಿತಿಲ್ಲ । ಆ ನಳಿನನಾಭನ ಕರುಣದಲಿ ಸುಳ್ಳಲ್ಲ ॥ ೫ ॥

ಧ್ವಜಾಸುರನ ಒಡ್ಡೋಲಗ

ಭೈರವಿ – ಝಂಪೆತಾಳ

ರಕ್ತಪುರದಧಿಪ ಧ್ವಜ । ದೈತ್ಯ ತಾನೋಲಗವ । ಇತ್ತತಾನಖಿಳ ದಾನವರ ಮೊತ್ತವನು ಸಲಹುತ । ಅರ್ತಿಯಿಂ ಸಭೆಯೊಳಗೆ । ಬಿತ್ತರಿಸುತಿರ್ದ ಖಳನಾಗ ॥೧॥ ಪುತ್ರ ಜಯವಿಜಯರಿಂ । ಗಿತ್ತು ಜನ್ಮವನೆರಡು । ನೇತ್ರಗಳ ತೆರದೊಳಿರುತಿಹರು । ಮತ್ತಗಜಪರಿಯವೋಲ್ । ಶಕ್ತರಾಗಿಹರಿನ್ನು । ಚಿತ್ತದೊಳು ಯೋಚಿಸಿಹೆನೊಂದು ॥ ೨ ॥ ಕಿರಿಯರದಿತಿಯ ಸುತರು । ಸುರಲೋಕವಾಳ್ತಿಹರು । ಹಿರಿಯರಾದೆಮ್ಮ ಧಿಕ್ಕರಿಸಿ॥ ತ್ವರಿತದಿಂದ್ವೈದಿವಶ । ಕರಿಸಬೇಕದರಿಂದ । ಕರೆದ ಜಯವಿಜಯರನ್ನಾಗ ॥ ೩ ॥

ಮಾರವಿ – ಏಕತಾಳ

ಅರ್ತಿಯೊಳೆಮ್ಮನು ಕರೆದಿರಿದೇತಕೆ । ತೀರ್ಥರೂಪರಿಂದು ॥ ವರ್ತಿಪ ಕಾರ್ಯಗಳೇನೆನುವದನೀ। ಪೂರ್ತಿ ಬೆಸಸಬಹುದು ॥ ೧ ॥ ತಾತನೀ ಪೇಳಿದ ಕಜ್ಜಗಳನು ನಾ ಸ್ಫೂರ್ತಿಯೊಳೆಸಗುವೆವು ॥ ಪ್ರೀತಿಯೊಳೆಮಗದ ಪೇಳುವದೆನೆಪಿತ । ಪುತ್ರರೊಡನೆ ತಾನು ॥ ೨ ॥

ಸೌರಾಷ್ಟ್ರ – ತ್ರಿವುಡೆ ತಾಳ

ಕೇಳಿದಿರೆ ಮಮ ಪುತ್ರರೀದಿನ । ಪಾಳಯವ ಸಹಿತೀಗ ಸ್ವರ್ಗವ । ನಾಳುವರೆ ಮನವಿಹುದು ಸನ್ಮತಿ । ಪೇಳಿರೆಲ್ಲ ॥ ೧ ॥ ಚಂದದಿಂ ಸದೆ ಬಡಿದು ವರ ಸಂಕ್ರಂದನನುವಣಿಸುತ್ತ ನಾಕಕೆ । ಮುಂದೆ ಧ್ವಜದೈತೇಶನೆನ್ನುತ ಹೊಂದಿಸುವೆನು ॥೨॥ ಇದಕೇತಕೆ ಅನುಮಾನ । ಹುಲು ತ್ರಿದಶರು ನಮಗೇನು ॥ ಅರೆ ನಿಮಿಷದಿ ನಾನು । ತೆರಳುತ ಬಡಿವೆನು ಸುರರೆಲ್ಲರನು ॥ ೩ ॥

ಭಳಿರೇ ಭಾಪುರೆ ಜಯವಿಜಯರ । ತಿಳಿದಿಹೆನು ನಾ ಮೊದಲೆ ವಿಕ್ರಮ। ಅಳುಕುವರಾವಲ್ಲವೆನುತಲಿ ಬಳಸಿರುವೆನು ॥ ೪ ॥

ದೇವಲೋಕ ದಾಳಿ

ಮುಖಾರಿ – ಏಕತಾಳ

ಕೇಳು ಕೇಳಯ್ಯ ನಿರ್ಜರೇಂದ್ರ । ಬಿಡಾದೆ ನಮ್ಮ । ಪಾಲಿಪ ಸುಗುಣ ಸಾಂದ್ರ। ಪೇಳಿದ ತೆರದ್ವಾರದೊಳೀದಿರುತಿರೆ । ಕಾಲನ ಪಾಳಯವೆಂಬೋಲ್ ಸೈನ್ಯವು ॥ ೧ ॥ ರಕ್ತಪುರೇಶನಂತೆ ಧ್ವಜನೆಂಬಾತ । ಪುತ್ರ ವಿಜಯ ಜಯನಂತೆ ॥ ಮತ್ತತೆಯಿಂ ಬಲು ಶಕ್ತಿ ಪ್ರದರ್ಶಿಸಿ । ಮತ್ತೀಸ್ವರವ ಕೈವರ್ತಿಪೆನೆನುತ ॥ ೨ ॥

ಭೈರವಿ – ಅಷ್ಟ ತಾಳ

ಪಡಿಚರರೆಂದುದನು । ಕೇಳುತ ಸುರ । ರೊಡೆಯ ಘರ್ಜಿಸುತೆಂದನು ॥ ಧಡಿಗರ್ಕೈ ತಂದರೆ ಬಿಡೆನೆಂದು ಸುರರನ್ನು । ಒಡನೆ ತಾ ಕರೆಸಿದನು ॥ ೧ ॥ ವರುಣಾಗ್ನಿ ಯಮ ಮುಖ್ಯರು ಕೇಳಿದಿರೆ ನೀವ್ । ನಿಋತಿ ಪ್ರಾಮುಖ್ಯರು ॥ ದುರುಳ ಧ್ವಜಾಸುರ । ಸುರಲೋಕ ಬಯಸಿಹ । ವರದಿಯ ಚರರೆಂದರು ॥ ೨ ॥

ಯುದ್ಧ ಭಾಗ : ಮಾರವಿ – ಏಕತಾಳ

ಎಲವೋ ಜಯ ನಿನಗಪಜಯವೆಂದಿಗು । ತೊಲಗುವುದೊಳಿತೆಂಬೆ । ಛಲವನು ತೋರ್ದರೆ ಫಲಸಿಗಲಾರದು । ಒಳಿತು ನಡೆವುದೆಂಬೆ ॥ ಸುರ ಗಡಣವ ಸದೆ ಬಡಿಯುತ ಲಾಪಾಮರದಿವಿಜೇಂದ್ರನನು ॥ ಸೆರೆ ಹಿಡಿದೀ ಸ್ವರಪುರಕೆ ಧ್ವಜಾಸುರ । ಅರಸನೆಂದೆನಿಸುವೆನು ॥ ೧ ॥

ಉರಿಯುತಲಿರುವ ಹಣತೆಗೆ ಹಾತೆಯು। ಎರಗಿದರೇನಹುದು । ದುರುಳನೆ ಇದನೀನರಿಯುತ ಮುರಿದ್ಯೆ । ತರಲದು ಒಳಿತಿಹದು ॥ ಅಸುರ ಸುರರ ರಣ ಕೌಶಲವೇನದು ಪೊಸತಿದು ಅಲ್ಲವಲಾ । ಉಸಿರ ಪಿಡಿದು ಹಿಂದೆಸೆಯೋಡಿದೆ ನೆಂ। ದೆಸೆದಸ್ತ್ರವ ತರಿಯೆ॥೨॥

ಭೈರವಿ – ಏಕತಾಳ

ಖಳರೊಳಗಾರ್ನೀನೆಲವೊ । ಪುರ। ವಳಯವ ಪೊಕ್ಕಿಹೆ ಛಲವೋ ॥ ಕೊಳುಗುಳದೊಳು ನಿನ್ನಸುವ । ನಾ । ತಳುವದೆ ತೆಗೆವೆ ನೋಡಿರವ ॥ ವಿಜಯನು ನಾನಾಗಿಹೆನು । ಪಿತ । ಧ್ವಜನೆಂಬುವದಾನವನು । ನಿಜ ಪೇಳುವ ಕದನದೊಳು । ನೀ। ನಜಯನು ಸಲ್ಲದು ತೆರಳು ॥೧॥

ವಿಜಯವು ನಾಮದಿ ಮಾತ್ರ । ರಣ । ವಿಜಯವ ಪಡೆವುದು ಸೂತ್ರಾ ॥ ದುರ್ಜನ ನೀನಾಗಿರಲು । ಒಂ । ದ್ವೆಜ್ಜೆ ಮುಂದರಿಯಲು ಬಿಡೆನು ॥ ಗಳಹದಿರೆಲವೊ ನಿರರ್ಥ । ಕೊಳು । ಗುಳುವನೆ ಸಗಲ ಸಮರ್ಥ ॥ ತಳುವದೆ ನಿಲು ನಿಲ್ಲೆನುತ । ಶರ । ಮಳೆಯೆಸೆದನು ಕೊಳ್ಳೆನುತ ॥೨॥

ಭೈರವಿ – ಅಷ್ಟತಾಳ

ಸುರರಿಂಗೊಡೆಯನೇನೋ । ಅರಿತಿಹೆ ನಾನು । ಕರದೊಳು ವಜ್ರವೇನೊ ॥ ಸುರಪುರವನು ಬಿಡು । ಹಿರಿಯವ್ವೆ ಸುತರಾವು ॥ ಅರಿತಿಲ್ಲವೇನೋ ನೀನು ॥ ಖಳವಂಶ ಧ್ವಜನು ನೀನು । ಅಲ್ಲದೆ ಸುರ । ನಿಳಯವ ಪಡೆವಡಿನ್ನು ॥ ಕೊಳುಗುಳಗೈದಿದ । ನೊಲಿಸುವ ಮನ ನಿನ । ಗೊಳಿತಲ್ಲ ಪೇಳ್ವೆನಿನ್ನು ॥ ಸಾರಿ ಪೇಳುವೆ ನಿನಗೆ । ಸ್ವರವ ಬಿಟ್ಟು । ಸಾರು ಬೇಗೀಗೆನಗೆ ॥ ಮೂರು ಮೂರ್ತಿಯ ದಯವಿರಲಿನ್ನು ಬೆದರೆನು । ನಾ ರಕ್ಷಿಸುವೆ ನಿನ್ನನು ॥ ಶಿಕ್ಷೆ ರಕ್ಷಾಕರ್ತದು । ನೀನಲ್ಲವು । ಪಕ್ಷಿವಾಹನನೋರ್ವನು ॥ ದಕ್ಕದು ನಿನಗೆ ತ್ರೈಮೂರ್ತಿಯ ದಯವಿರೆ । ಶಿಕ್ಷಿಸಲರ್ಹನಾನು ॥

ಭೈರವಿ – ಏಕತಾಳ

ಬಡಿದು ಬಿಡೌಜರ ಖಳನು । ತಾ । ನೊಡ ಸೇರಿದ ಪೀಠವನು । ಹೊಡೆಸಿದ ಡಂಗುರವಲ್ಲಿ । ಆ । ಧಡಿಗರ ಜೈಕಾರದಲಿ ॥೧॥

ಸಾಂಗತ್ಯ – ರೂಪಕ ತಾಳ

ದನುಜ ರಟ್ಟೊಳಿ ತಾಳಲಾರದೆ ಸುರನಾಥ । ಮನದೊಳು ಮರುಗಿ ಯೋಚಿಸುತ ॥ ವನಜನಾಭನ ಹೊರತಿನ್ನಿಲ್ಲ । ಕಾಯ್ವವ । ರೆನ್ನುತೈದೆ ವೈಕುಂಠದೆಡೆಗೆ॥ ೧॥

ವಿಷ್ಣು

ಸೌರಾಷ್ಟ್ರ – ತ್ರಿವುಡೆ ತಾಳ

ಆದಿಮಾಯೆ ನೇಮವನು ಅನು॥ ಮೋದಿಸುತ ವೈಕುಂಠದಲಿ ರ। ಮಾಧವನು ಸ್ಥಿತಿಗತಿತ್ವವ । ಸಾದರದಲಿ ॥ ೧ ॥ ಸೃಷ್ಟಿಯೊಳು ಧರ್ಮಾಧರ್ಮದ । ನಿಷ್ಠರಿಗೆ ತಕ್ಕಂತೆ ಕರ್ಮವ । ಕೊಟ್ಟು ಪಾಲಿಸುತಿದ ನಿತ್ಯದಿ । ಅಷ್ಟರೊಳಗೆ ॥ ೨ ॥ ಹರಿಯ ನಾಮವ ನೆನೆದು ಸುರವರ । ನೆರಗಿ ಕರಮುಗಿಯುತ್ತ ನಿಂದಿರೆ । ಹಿರಿಯರಸನ ಕಾಣುತ್ತ ಕರುಣದೊ । ಲೊರೆದ ನಿಂತು ॥ ೩॥

ರಾಗ ಸುರುಟಿ – ಏಕತಾಳ

ಸುರವರ ಕೇಳಿತ್ತ । ಬಂದಿಹ । ಪರಿಯನುಸುರು ಮತ್ತಾ । ಪರಿಕಿಸೆ ನಿನ್ನಯ ಮುಖ ಬಾಡಿದ ತೆರವಿರುವುದು ಬಂದಿಹ । ದುರಿತವದೇನೊರೆ॥ ೧॥

ಸಾಮ – ಅಷ್ಟತಾಳ

ಲಾಲಿಪುದೆಲೆ ಮುಕುಂದ । ಬಂದಿಹ ಕಷ್ಟ । ಪೇಳ್ವೆನು ಲಾಲಿಸದ ॥ ಖೂಳ ಧ್ವಜಾಸುರ ಬಾಲರನೊಡಗೊಂಡು । ಕಾಳಗದೊಳು ನಮ್ಮ ಸೋಲಿಸುತಾಳುವ ॥ ೧ ॥ ತರಿದು ನೀನಿನ್ನವರ । ಮರಳಿ ಸ್ವರ್ಗ ಕರುಣಿಸೆನಗೆ ಶ್ರೀವರ ॥ ಹರಿಯೆ ನೀನಲ್ಲದಿನ್ನಾರು ಪಾಲಿಪರೆಂದು । ಎರಗಲು ಭಕ್ತಿಯೊಳು । ಸುರಪ ತಾನು ॥ ೨ ॥

ಕೇಳಿದಾಕ್ಷಣ ಮಾಧವ । ಪೇಳಿದ ಸುರ । ಪಾಲನೆ ನೀ ಧೈರ್ಯವ ॥ ತಾಳು ನೀ ಖೂಳರ ಕಾಳಗದಲಿ ಯಮ। ನಾಲಯ ಕಟ್ಟುವೆನು । ತೆರಳು ನೀನು ॥ ೩॥

ಮಾರವಿ ಏಕತಾಳ

ಸುರಪಗೆ ಧೈರ್ಯವನೊರೆದಾಕ್ಷಣ ಶ್ರೀ । ಹರಿ ಚಕ್ರವನು ॥ ಧರಿಸುತ ಕರದಲಿ ಹೊರಟನು ಖಳನೊಳು । ಧುರಕತಿ ಶೀಘ್ರದಲಿ ॥ ೧॥

ಭೈರವಿ – ಏಕತಾಳ

ಪುರವ ಪೊಗುತ ಶಂಖವನು । ಶ್ರೀಹರಿಯೂದಲು ಕೇಳ್ದದನು ॥ ದುರುಳ ಎದೆ ಕಂಪಿಸಲು । ತಾ । ಬೆರಗಿನೊಳತಿ ಘರ್ಜಿಸಲು ॥ ೧ ॥ ಶಂಖಧ್ವನಿಯಾಲಿಸುತ । ಖಳ । ಬಿಂಕವ ತೋರುವೆನೆನುತಾ । ಪಂಕಜನಾಭನ ನೋಡಿ । ಮದ । ಹಂಕೃತಿಯೊಳೊದರಿದ ಖೋಡಿ ॥ ೨॥

ಶಂಕರಾಭರಣ – ಮಟ್ಟೆತಾಳ

ಯಾರು ನೀನು ಯಾಕೆ ಬಂದೆ । ಚೋರ ಪೇಳೆಲಾ ॥ ದಾರಿ ತಪ್ಪಿ ಹೋಯ್ತೆ । ನಿನಗೆ । ಸಾರು ಸಾರೆಲಾ ॥ ೧ ॥ ಯಾರು ಎಂಬ ಬಗೆಯ ಕೇಳ್ವ । ಧೀರನಾರವ ॥ ಮೂರು ಮೂರ್ತಿಗಳಲಿ ಯೊಬ್ಬ । ಶ್ರೀಕರ ಮಾಧವ ॥ ೨ ॥ ಶಂಖನಾದದಿಂದಲೆನ್ನ । ಮಂಕುಗೊಳಿಪೆಯ । ಬಿಂಕತೋರ್ದಡೀಗ ನಿನ್ನ । ಕೊಂಕು ನಿಲಿಪೆಲಾ ॥ ೩ ॥ ಸುರರನ್ನೆಲ್ಲ ಗೆಲಿದು ಸ್ವರ್ಗ । ಮೆರೆವ ನಿನ್ನನು ॥ ತರಿದು

ಪೊಗಿಪೆನೀಗ ಯಮನಪುರಕೆ ನಿನ್ನನು ॥ ೪ ॥ ಸುರಪ ಮುಖ್ಯ ಮನುಜರೆನಗೆ । ನಿರತ ಮಣಿವರು ॥ ಧುರದೊಳೆನಗೆ ಎಣೆಯೆ ನೀನು । ಪರಿಕಿಸೆಂದನು ॥ ೫॥

ಭಾಮಿನಿ

ಧುರದಿ ಖಳನನು ಕಳುಹಿಸುತ ಯಮ । ಪುರಕೆ ಸುರಪನ ಕರೆದು ಸ್ವರ್ಗದ । ಸಿರಿಗೆ ಪಟ್ಟವ ಕಟ್ಟಿ ಪುನರಪಿ ಹರುಷದಿಂದಿರಲು ॥ ದುರುಳನಳಿದಿಹ ವಾರ್ತೆ ಕೇಳ್ದಾ । ತರಳರಾಜಯ ವಿಜಯರೀರ್ವರು । ಬೆರೆತು ತಮ್ಮೊಳು ತಾವೆ ಯೋಚಿಸುತೆಂದ ರೀ ತೆರದಿ ॥೧॥

ಸಾಂಗತ್ಯ – ರೂಪಕ ತಾಳ

ಪೆತ್ತ ತಾತನ ಮರಣೋತ್ತರ ಕ್ರಿಯೆಯ । ಹತ್ತನೇ ದಿನ ವಿರಚಿಸುತ । ಹತ್ಯೆಗೆ ಕಾರಣನಾ ಪುರುಷೋತ್ತಮ । ಮಿಥ್ಯವೆಂದನು ॥ ೧ ॥ ಜನಕನಳಿವಿನೊಳು ಮೂಲ ಕಾರಣನಾದ । ಅನಿಮಿಷೇಂದ್ರನು ಹೊರತಲ್ಲ । ರಣದೊಳಾತನ ಸೋಲಿಸುತ ನಾಕ ವಶಗೈವ । ಮನ ಮಾಡಬೇಕೆನುತಾಗ ॥ ೨ ॥

ಸುರುಟಿ – ಏಕತಾಳ

ತೆರಳುತ ಕಾನನದಿ । ತಪವನು । ವಿರಚಿಸುತಲೆ ಗುಣದಿ ॥ ಪರಿಪರಿಯೊಳಗಾ ಸರಸಿಜಭವನನು । ಸ್ಮರಿಸುತ ಮೆಚ್ಚಿಸಿ । ವರವ ಪಡೆವ ಮನ ॥ ೧ ॥ ನಿನ್ನಯ ನುಡಿ ಹಿತವು । ಮನಕಿದು ಸನ್ಮತವಾಗಿಹುದು ॥ ಇನ್ನನುಮಾನವಿಲ್ಲೆನ್ನುತ ಸಹಜರು । ನನ್ನಿಯಿಂ ಕಾನನವನು ಸೇರಿದರು ॥ ೨ ॥

ಕೇದಾರಗೌಳ – ಅಷ್ಟತಾಳ

ಪುರದ ರಕ್ಷೆಗೆ ಮಂತ್ರಿ ಸೇನಾಪತಿಗಳನ್ನು । ಹರುಷದಿ ಕರೆಸಿಕೊಂಡು ॥ ಪರಿವಾರ ಪ್ರಜೆಗಳ ಆರಭಾರವನೆಲ್ಲ । ಪರಿಪರಿ ವಿಧಿಸಿದರು ॥ ೧॥

ರೂಪಕ

ತರಳರೀರ್ವರು ಘೋರಾರಣ್ಯವ ಪೊಗುತಲೀ । ಸರಸಿಯೊಳ್ ಮಿಂದಾದ ಬಳಿಕ॥ ಪರಿ ಪರಿ ಭಕ್ತಿಯೊಳರವಿಂದ ಭವನ ತಾ। ಸ್ಮರಿಸುತ್ತ ತಪಗೈಯುತಿರಲು ॥ ೧ ॥ ಚಳಿಮಳೆಯನು ಲೆಕ್ಕಿಸದೆ ತಪಗೈಯಲು । ಒಲವು ಕಾಣದೆ ಅಜಿನ ॥ ಇಳೆಯೊಳು ಬದುಕಿ ನಾ ಫಲವಿಲ್ಲವೆನುತಲಿ । ಗಳಕಿಡೆ ಖಡುಗವನ ॥ ೨ ॥

ನವರೋಜು

ತರಳರೇ ನೀವ್ ಎದ್ದೇಳಿ । ನಾ । ತ್ವರಿತದಿ ಬಂದಿಹೆ ಕೇಳಿ ॥ ಪರಿಪರಿಯೊಳು ಸ್ಮರಿಸಿದ ಕಾರಣವರಿಯೆ । ಈರ್ವರವನೆನ್ನೊಳು ಪೇಳಿ ॥೧॥

ಝಂಪೆತಾಳ

ಎರಗಿ ಈರ್ವರಲೋರ್ವ । ಸರಸಿರುಹ ಸಂಭವನೆ । ಮರಣಬಾರದ ತೆರದಿ । ವರವ ಕರುಣಿಪುದು ॥ ಹುಟ್ಟಿದವನಿಗೆ ಮರಣ । ಕಟ್ಟಿ ಇರಿಸಿದ ಬುತ್ತಿ । ಕಟ್ಟಳೆಯ ಮುರಿದರೆನ ಇಷ್ಟೇನೇನಯ್ಯ ॥ ದಿಟ್ಟವರ ಬೇರೆ ಮನ । ಬಿಷ್ಟವೇನಿಹುದದನು । ಥಟ್ಟನೀವೆನು ಎನಲು । ದುಷ್ಟ ಯೋಚಿಸುತ ॥೧॥

ತ್ರಿವುಡೆ ತಾಳ

ಮನದುಧಾಗ್ರಜ ಕೇಳು ಭಿಷ್ಟವ । ರಣಕೆ ನಿಂತರೆ ಸೋಲನರಿಯದ । ಘನತರಾಯುಧ ಸಹಿತ ಕುದುರೆಗ । ಳೆನಗದೆರಡು ॥ ೧ ॥ ಮನದ ವೇಗದೊಳಿರಲು । ಬೇಕೀಗೆನಗೆ ಮರಣವದೆಂತೆನುವದನು ವಿನಯದೊಳು ಪೇಳೆನಲು । ಪದುಮಜ । ದನುಜಗೆಂದ ॥ ೨ ॥

ಮರಣವಾರಿಂದಿಲ್ಲವಾದರೂ । ಹರುಷದಿಂ ಹಯವೆರಡ ಮಿಲನದಿ ॥ ಧರೆಯೊಳುದಿಸಿದ । ಮನುಜನಿಂದಲಿ । ತೊರೆವಿರಸುವ ॥ ಕನಕಗರ್ಭನ ನೇಮದಿಂದಲಿ । ಧನುಜರೀರ್ವರು ಹರುಷಗೊಂಡಾ । ರಣದಿ ನಾವಿನ್ನಾರನಾದರು । ಗಣಿಪರಲ್ಲ ॥ ೧ ॥ ಕರುಣಿಸಿಹ ದ್ವೆಯ ಹಯವ ಮತ್ತಿ । ನ್ನೆರಡು ಅಶ್ವಗಳಾ ರಮಿಸಿ ಉದಯಿಸಿ ಬರುವುದುಂಟೇ । ಮನುಜ ಮುಂದಕೆ । ಮರಣವಿಲ್ಲ ॥ ೨ ॥

ಝಂಪೆತಾಳ

ಅಂಗಕಾಳಿಂಗರನು । ಭಂಗಿಸುತ ಸಮರದೊಳು । ವಂಗ ಮಲೆಯಾಳ ದ್ರಾವಿಡರ ॥ ಸಂಗರದಿ ಸೋಲಿಸುತ । ಹಿಂಗದವರೊಡಗೊಂಡು । ಸಂಗ್ರಹಿಸಿ ಕಪ್ಪಮಂ ಸಹಿತ ॥೧॥

ಏಕತಾಳ

ದ್ವೇಶಿಗ ಪಿತನವ ಶೇಶಕೆ ಕಾರಣ । ಆ ಶತಮುಖನವನ ॥ ನಾಶಗೊಳಿಸದಿರೆ ಲೇಸಿಲ್ಲೆನುತಲೆ । ಆ ಸುಭಟರು ತರಳೆ ॥ ೧॥

ಯುದ್ಧಭಾಗ

ಮಟ್ಟೆತಾಳ

ಧನುಜ ಕೇಳು ಮತ್ತೆ ಮತ್ತೆ । ರಣಕೆ ಬಂದೆಯ ॥ ಜನಕ ಪೋದ ಮನೆಗೆ ಪೋಪ । ಮನವ ಮಾಳ್ಪೆಯ ॥ ೧ ॥ ಸುಮನಸ ಕೇಳು ಪೊರೆದ ಪಿತನ । ಹಿರಿದು ದ್ವೇಶವಾ । ಮೆರೆಸಲೀಗ ವರವ ಪಡೆದು । ಧುರಕೆ ನಿಂದವ ॥ ಆರೆಲೊ ಮದಾಂಧ ನಿಲ್ಲು । ವೀರರನ್ನು ರಣದಿ ಗೆಲ್ವ । ಶೂರತನವನೆನ್ನೊಳೀಗ । ತೋರು ತೋರೆಲಾ ॥ ೧ ॥ ಅಸುರ ಸುರರ ರಣ ಕೌಶಲವೇನದು ಪೊಸತಿದು ಅಲ್ಲವಲಾ । ಉಸಿರ ಪಿಡಿದು

ಹಿಂದೆಸೆಯೋಡಿದೆ ನೆಂ । ದೆಸೆದಸ್ತ್ರವ ತರಿಯೆ ॥ ೨ ॥ ವಿಧಿಯವರವ ಪಡೆದ । ಅಧಮ ಕೇಳೆಲಾ । ಮುದದಿ ರಾತ್ರಿ ಬುಧಿಯ ಕಂಡು ಬಿದ್ದೆ ಹಗಲೊಳಾ ॥ ೧ ॥ ಅದನು ಬಿಟ್ಟವನು ಕೇಳು । ಕದನ ಮಧ್ಯದಿ । ಒದೆಯ ತಿಂದು ಬದುಕಲೋಡಿ । ಬದಲು ಮಾರ್ಗದಿ ॥ ೨ ॥

ರೂಪಕತಾಳ

ಅಸುರರಟ್ಟೊಳಿ ಸಹಿಸುವೆನೆಂತಾನೆನುತಲೆ । ನುಸುಳಿ ಕಾನನದೆಡೆಯ ॥ ಅಸಮ ಸಾಹಸಿಗಳಾಗಿಹರಿನ್ನು ದುರುಳರು । ಕುಸುಮನಾಭಗೆ ಜಯವಿಲ್ಲಾ ॥ ೧ ॥ ಪೊರೆವವರಾರೆನ್ನನೆನುತ ಯೋಚಿಸಿ ಮತ್ತೆ । ಪುರಹರನೋರ್ವರಿನ್ನಿಲ್ಲ ॥ ಬರಿದೆ ಚಿಂತಿಸಿ ಫಲವಿಲ್ಲವೆನ್ನುತ ಬೇಗ । ಪೊರಟನು ರಜತಾದ್ರಿಯೆಡೆಗೆ ॥ ೨ ॥

ತ್ರಿವುಡೆತಾಳ

ಸಿತಗಳನು ತಾ ರಜತ ಶೈಲದಿ । ಸತತ ಗಣಗಳ ಕೂಡಿ ಕಾರ್ಯವ । ಹಿತಮಿತದೊಳಸಗುತ್ತಲಿರೆ ಪಶು । ಪತಿಯು ತಾನು ॥ ೧ ॥ ಭವಹರನೆ ಸಲಹೆಂದು ಸ್ತುತಿಸುತ । ಶಿವಗೆರಗಿ ಸುರಪಾಲ ನಿಂದಿರೆ । ಜವನ ವೈರಿಯು ಕಂಡು ಕೇಳ್ದನು । ದಿವಿಜ ಪತಿಯು ॥ ೨ ॥

ಅಷ್ಟತಾಳ

ಏಳಯ್ಯ ಸುರಪಾಲ ಹೇಳಿಕೇಳದೆ ಬಂದೆ । ಕಾಲಕಾರಣವಿಲ್ಲದೆ ॥ ಗೋಳುಗುಟ್ಟುವದ್ಯಾಕೆ । ಪೇಳು ಬಂದಿಹ ಕಷ್ಟ । ಲಾಲಿಸಿ ಕೊಡುವೆ ನಿಷ್ಟ ॥ ೧ ॥

ರೂಪಕತಾಳ

ಪಾಲಾಲೋಚನ ಕೇಳು ಖೂಳ ವಿಜಯಜಯ । ನಾಳಿಕೋದ್ಭವ ವರಬಲದಿ ॥ ಸೋಲಿಸಿ ನಾಕವನಾಳುತ್ತಲಿರುವರು । ಸೀಳುತೆಮ್ಮನು ಪೊರೆದೇವ ॥ ೧ ॥

ತ್ರಿವುಡೆ ತಾಳ

ಕೇಳಿದಾಕ್ಷಣ ಶೂಲಪಾಣಿಯು । ತಾಳಿರೋಷವ ಖೂಳನನು ಯಮನಾಲಯಕೆ ಕಳುಹುವೆನು ಬಾಲಕ । ಕೇಳಿರೆಲ್ಲ ॥ ೧ ॥

ಬಲಗಳನ್ನು ಕರೆದು ಯುದ್ಧಕ್ಕೆ ಕಳುಹಿಸುವುದು

ನಾರದನ ಮುಖದಿಂದ ತಿಳಿದ ವಿ । ಚಾರವನು ಕೇಳ್ದಾಗ ಶ್ರೀಹರಿ । ಚಾರುವದನನ ಕಾಂಬೆನೆನುತಲಿ । ಭೋರನೈದೆ ॥ ಮಾಧವನ ಕಾಣುತ್ತ ಲಷ್ಟರೊ। ಳಾದಯನಿಧಿ ಬ್ರಹ್ಮನೊಂದಿಸೆ । ಶ್ರೀಧರನೆ ಬರವೇನು ಪೇಳ್ಮೈ । ಸಾಧುವಂಧ್ಯ ॥ ತರಳ ನಾರದನೆನ್ನೊಳೊರೆದಿಹ । ದುರುಳರಾ ಜಯ ವಿಜಯರೀರ್ವರು । ವರಬಲದಿ ಕೊಬ್ಬಿಹರು ಯೋಚಿಸೆ । ತರಿವುದೆಂತು ॥ ವರವ ಕೊಟ್ಟಿಹೆನಹುದು ಪೂರ್ವದಿ ।

ಳೆರಡು ಹಯ ಸಮ್ಮಿಲನ ವೀರ್ಯದಿ । ವರಶಿಶುವು ಉದಿಪಂತೆ ಕಾರ್ಯವ । ವಿರಚಿಸುವುದು ॥ ಸುರಪ ಶಂಕರನಿಗೆ ದೂರಲು । ತೆರಳುವನು ಧುರಕಾಂಕ್ಷಿಯಾಗುತ । ಮರಳಿಪುದು ಒಳಿತೆನುತಲೈತರೆ । ಗಿರಿಯ ಬಳಿಗೆ ॥

ಏಕತಾಳ

ಗಣಗಡಣವು ಕೈ ಸೋತಿಹೆವೆನಲಾ । ಕ್ಷಣದೊಳು ಶಿವತಾನು ॥ ರಣಕ್ಕೈ ತರಲೆಂದನು ಸಾಗುತಲಿರೆ । ಧನುಜಾಂತಕ ತಡೆದು ॥೧॥

ಬೇಗಡೆ – ಅಷ್ಟತಾಳ

ಹರಭಾವ ಶಿವಶಿವನೆ ನಿಲ್‌ನಿಲ್ಲು । ಪೊರಟಿರ್ಪ ಕಾರ್ಯವ । ನರಿತು ಬಂದಿಹೆ ಮಾಡದಿರು ಗುಲ್ಲು ॥ ದುರುಳರನು ಸಂಹರಿಸಿ ಸುರರನು । ಪೊರೆವ ಸಮಯವಿದಲ್ಲ ತರಳರು । ವರವ ಪಡೆದಿಹ ವಾರತೆಯ ನಾ । ಬ್ರಹ್ಮ । ಪುತ್ರನ ಮುಖದಿ ತಿಳಿಹೆ ॥ ೧ ॥ ಪುರುಷ ಪ್ರಾಕೃತಿಗಳಾದ ಹಯಬೆರತು । ಸಮ್ಮಿಲನ ವೀರ್ಯದಿ । ಧರೆಗೆ ಜನಿಸುವ ಶಿಶುವಿನಿಂ ಹೊರತು ॥ ಮರಣವಿಲ್ಲವೆನುತ್ತ ವರಗಳ ಕರುಣಿಸಿಹ ನಾ ಸರಸಿಜೋದ್ಭವ । ಬರಿದೆ ಹಳಚಿದರೇನು ಸಾರ್ಥಕ । ಮರೆಯೊಳಿರು ನೀ ಕಾಯ್ವ ಸಮಯವ ॥ ೨ ॥

ಭೈರವಿ – ಝಂಪೆತಾಳ

ಇತ್ತ ಸ್ವರಪತಿಕರಿಸಿ । ಧೂರ್ತ ತರಳರು ಮನದಿ । ಮತ್ತರಾಗುತ ನುಡಿದರೀರ್ವರಿ ತೆರದಿ ॥ ಪೆತ್ತ ಪಿತನನು ತರಿದ । ಪಿತ್ತವಿಳಿಸುವ ಹರಿಯ ಪತ್ತನವ ವಶಕರಿಸುಪುದೆನಲು ॥ ೧ ॥ ನುಡಿದ ಮತೋರ್ವ ನೀ । ನುಡಿದ ನುಡಿ ಸರಿಮನಕೆ । ಎಡರು ತೊಡರುಗಳೆಂಬುದಿಲ್ಲ ॥ ಒಡನಶ್ವಗಳನೀಗ । ಅಡರಿ ಪಯಣಿಪುದೆನುತ । ಧಡಿಗರೀರ್ವರು ನಡೆಯೆ ವೈಕುಂಠದೆಡೆಗೆ ॥ ೨ ॥

ಕಾಂಭೋಜ – ಅಷ್ಟತಾಳ

ಪದುಮನಾಭನು ತನ್ನ ಮನದಿ । ಯೋಚಿಸಿದ ಖಳರ್ವೈಕುಂಠಕ್ಕೈದಿ ॥ ಮದಮುಖತ್ವವ ತೋರ್ಪರವರನಾ ನೀದಿನ । ಕದನವೆಸಗದೆ ತಿರುಗಿಸುವೆನೆನೆ । ಬದಲು ಯೋಚನೆಯೊಂದನ್ನೈಯಲು ॥೧॥ ವರವಿಪ್ರ ವೇಷವ ಧರಿಸಿ । ಕುಳಿತಿರುವೆ ರಕ್ಕಸರ್ಹಯವೆರಸಿ ॥ ಬರುವ ಸಮಯ ಕಾಂಬೆನೆನುತ ನಾಟಕಧಾರಿ । ಹರುಷದೊಳಗಿರೆ ಖಳರು ಹಯವಿಳಿದೆರಗಲವ ಪಿಡಿದೆತ್ತುತುಸುರಿದ ॥ ೨ ॥

ಕೇದಾರಗೌಳ – ಝಂಪೆತಾಳ

ಯಾರಯ್ಯ ನೀವೀರ್ವರು । ತೆರೆದಿಹಿರಿ । ಊರದೇಕದನರುಹಿರಿ ॥ ಆರೊಳಿದೆ ಕಾರ್ಯ ನಿಮಗೆ । ಎನ್ನೊಳು ವಿ । ಸ್ತಾರದಿಂ ಪೇಳಿರಿ ॥ ೧॥

ಮಧ್ಯಮಾವತಿ – ಏಕತಾಳ

ಧರಣಿಸುರರೆ ನೀವು ಅರಿಯಿರಿ ಸಟೆಯ । ವರಮಹಾವೈಕುಂಠವರಿತು ಈ ಎಡೆಂಯು । ಹರಿಯುಕಾಣಿಸು ಕಾರ್ಯುವಿಪ್ಪುದು ಜೀಯು । ಇರುವಿರ ಬಡವಿಪ್ರಮಹದಾಶ್ಚರ್ಯ ॥ ೧ ॥

ಭಾಮಿನಿ

ಅರೆರೆ ನೀವ್ಯೆತರಲು ಸಮಯವು । ಸರಿದಿಹುದು ಸ್ಥಿತಿ ಕಾರ್ಯ ನಿಮಿತದಿ । ತೆರಳಿಹನು ಯಾವಾಗಲ್ಯೆತಹನರಿಯೆನಾನೆಂದ ॥ ೧ ॥

ಭೈರವಿ – ಏಕತಾಳ

ಒರೆಯದಿರೆಮ್ಮೊಳು ಸಟೆಯ । ಬಡ । ಧರೆಯಮರನು ನೀ ಮುದಿಯ ॥ ಸರಿದಿಹನವನೀಗೆಲ್ಲಿ । ನೀನರಿತಿಹೆನವಯಾವಲ್ಲಿ ॥ ೧ ॥ ಅರಿತಿರೆ ಪೇಳಿನ್ನೆಮಗೆ । ಅವ । ನರಿಯಾಗಿಹನಿಂದೆಮಗೆ ॥ ಮರಣವ ತಂದಿಹ ಪಿತಗೆ । ಶಿರ । ವರಿಯುವೆ ನೆಂಬಾ ಬಗೆಗೆ ॥ ೨ ॥

ಭಾಮಿನಿ

ತರಳರಿರ ನಾನರಿಯೆ ಸಟೆಯನು । ಅರುಹಲಿಲ್ಲವ ತೆರಳ್ವ ಸಮಯಕೆ । ಬರಿದೆ ಕೋಪಿಸಬೇಡಿರೆನುತಲಿ । ಕರವ ಮುಗಿದೆಂದ ॥ ೧ ॥

ಸೌರಾಷ್ಟ್ರ – ತ್ರಿವುಡೆ

ಹಾರುವನ ನುಡಿ ಕೇಳಿ ಋೂಳರು । ಪಾರಮಾರ್ಥವೆನುತ್ತ ಮನದಿ । ಬಿಡಾರವನು ಕೇಳುತ ಸಮಯದ । ನಿರೀಕ್ಷಿಸುತ್ತ ॥ ಪರಮರಸದೂಟವನು ಭುಂಜಿಸಿ । ಸರಸಿಜಾಕ್ಷನು ವಿರಮಿಸುತ್ತಿರೆ । ಪರಮ ಪಾವನೆ ಸಿರಿಯ ಸೇವೆಯ । ವಿರಚಿಸುತಲಿ ॥ ೧ ॥ ಇತ್ತ ಗಂಧರ್ವೇಶನಾದಿನ । ಚಿತ್ತ ಸೆಳೆಯುವ ಶ್ವೇತದಶ್ವವ । ಹತ್ತಿ ಆಕಾಶದಲಿ ವಿಹರಿಸು । ತಿರಲು ಕಂಡು ॥ ೨ ॥

ಕಾಫಿ – ಅಷ್ಟತಾಳ

ಶ್ವೇತವರ್ಣದ ಹಯ ನೋಡಿ । ಬಂಧಿ ಜಾತೆ ಸೇವೆಯನು ಬಿಟ್ಟೋಡಿ । ಈ ತೆರದಶ್ವ ಇನ್ನಿಲ್ಲ । ಎಂದು । ನಾಥನ ಬಳಿಗೈದಿ ಪೊಗಳಿದಳೆಲ್ಲ ॥ ೧ ॥ ಹಯ ಬಲು ನಯವಾಗಿಹುದು । ಮೇಲೆ ಪಯಣಿಸುವವನೊಬ್ಬ ಬಲು ಭಾಗ್ಯನಹುದು ॥ ನಯನವೆರಡು ನೋಡೆ ಸಾಲದು । ಕಂಜ । ನಯನ ನೀ ನೋಡದ ನಾ ಪೇಳ್ವುದಹುದು ॥ ೨ ॥

ಭಾಮಿನಿ

ಇಂದುವದನೆಯು ಹಯವ ಪರಿ । ಪರಿಯಿಂದ ಪೊಗಳಲು ಖತಿಯತಾಳು । ಇಂದಿರಾಧವ ನೋಡಿ । ಸತಿಯನು ಜರೆವು ತಿಂತೆಂದ ॥ ೧ ॥ ಇಂದುಮುಖಿ

ಹಯಕಂಡು ಸೇವೆಯ । ನಿಂದು ಮರೆತನ್ಯಾಯವೆಸಗಿದೆ । ಮುಂದೆ ನೀನಿರು ಅಶ್ವವಾಗಿಯೆ ಸೇರು ಕಾನನ ॥ ೨ ॥

ಸೌರಾಷ್ಟ್ರ – ತ್ರಿವುಡೆ

ಸರಿಯೆ ಕೆಲಸಮಯದಲಿ ಶ್ರೀಹರಿ । ತರುಣಿಯಳ ಬಿಟ್ಟಿರದೆ ಮನದೊಳು । ಅರಸಿಯಳ ನಾ ಸೇರ್ವ । ಬಗೆಯೊಳು । ತರಹರಿಸಿದ ॥ ೧೩

ಸುರುಟಿ – ಏಕತಾಳ

ರೂಪಾಂತರಗೊಳಿಸಿ । ಕುದುರೆಯ ರೂಪ ತಾನೆ ಧರಿಸಿ ॥ ತಾಪಕೆ ತರುಣಿಯನೀಕ್ಷಿಪಂದದಲಿ । ಗಾ ಪರಮಾತ್ಮನು ತಾ ಪಯಣಿಸಿದ ॥ ೧೫

ಭಾಮಿನಿ

ಸತಿಪತಿಯರೋರ್ವರನು ಓರ್ವರು । ಹಿತದೊಳೀಕ್ಷಿಸೆ ಮನುಮಥನ ಶರ । ಹತಿಗೆ ಬಲುಕುತ ಬಳಲಿ ಮತ್ತಿಂತೆಂದನವಳೊಡನೆ ॥ ೧೪

ಬಿಲಹರಿ – ಅಷ್ಟತಾಳ

ಪರಮ ಸುಂದರಿ ಬಾರೆ ಚದುರೆ । ಸ್ಮರ । ಶರವೆನ್ನ ಭಾದಿಪುದೀಗಲೆ ಕುದುರೆ । ನೆರೆಹಿಸೆನು ಅದ ನಿನ್ನರೆ ನಿಮಿಷ । ತಡೆ । ದರೆಯೆನ್ನ ದೇಹವಿಗಪ್ಪುದು ಧ್ವಂಸ ॥ ೧ ॥ ವಿರಹವೆಗ್ಗಳಿಸಿ ಕಾಮಿನಿಯು । ನಿನ್ನ । ನೆರೆಯಲಿನ್ನೆನಗೆ ನಾಚಿಕೆಯು । ಶಿರವ ತಗ್ಗಿಸಿ ನಿಲ್ಲೆನೆನಲು । ಗಂಡು । ತುರಗವೆಂದಿತು ಹೆಣ್ಣನೋಡಿ ಮೋಹದೊಳು ॥ ೨ ॥ ನೀರೆ ನೀನದನೆಣಿಸದಿರು । ಬಂದು । ಸೇರೆನ್ನ ವಿರಹವನೀಗ ನೀ ತಣಿಸು । ಪರರುಕಾಂಬರೆ ಎಮ್ಮನಿಲ್ಲಿ । ಘೋರ । ತರವಿಪಿನಕೆ ಬರ್ವರಾರಿಲ್ಲಿಗಿಲ್ಲ ॥ ೩ ॥ ಎನೆ ಕೇಳಿ ಹರುಷದಿಂದಾಗ । ಮನ್ಮಥನ ಬಾಣ ದುರೆಬೆಯಿಂದಾಗಲಾ ತುರಗ ॥ ಘನ ಸ್ನೇಹದೊಳಗೆ ಚುಂಬಿಸಲು । ಅರೆಕ್ಷಣದಿ ಸಮ್ಮಿಲನದಿಂದೊಂದಾದರಾಗ ॥ ೪ ॥

ಭಾಮಿನಿ

ಮಂಗಳಾಗಿಸುಗರ್ಭ ತಾಳಲು । ತಿಂಗಳುಗಳುರುಳಲ್ಕೆ ತುರಗವು । ಮಂಗಳಾತ್ಮಕ ಗಂಡು ಶಿಶುವಂ ಪಡೆದು ಸುಲಗ್ನದಲಿ ॥ ೧ ॥ ಜನಿದಾಕ್ಷಣ ಕರದ ಚಕ್ರವ । ತನಯನೆದೆಗೊತ್ತುತ್ತ ಶಿಶುವನು । ಮುನಿಪನಾಶ್ರಮ ಸನಿಹ ಬಿಟ್ಟತ್ತಸಾರಲ್ಕೆ ॥ ೨ ॥

ಸೌರಾಷ್ಟ್ರ – ತ್ರಿವುಡೆತಾಳ

ಋಷಿಯದಾಶ್ರಮ ಬಾಹೆಯೊಳು ನರ । ಶಿಶುವು ತಾ ನಳುತಿರಲು ಮುನಿಪತಿ । ಕುಶಲದೊಳ್ಳೈತರ ತಲೀಕ್ಷಿಸೆ । ಹಸುಮಗುವನು ॥ ೧ ॥ ಪರಿಕಿಸಲು ಬಾಲಕನ

ಹೃದಯದಿ । ಹರಿಯ ಚಕ್ರದ ಚಿಹ್ನೆಯದು । ಗೋಚರಿಸಲಚ್ಚರಿಗೊಳುತ ಮನದೊಳು । ಧರೆಯಮರನು ॥ ೨ ॥ ಧಾರಿಣಿಯೊಳೀತನನು ಮುಂದಕೆ । ಏಕಚಕ್ರ ವೀರನೆನ್ನುತ । ಚಾರು ಪೆಸರನು । ಇರಿಸಿ ಪೊರೆದನು । ದಾರತೆಯಲಿ ॥ ೩ ॥

ಭಾಮಿನಿ

ಪರಿಪರಿಯ ವಿದ್ಯೆಗಳ ಬೋಧಿಸ। ಲರಿತು ನಾರದ ಮುನಿಪ ಪಿತಗಿದ । ನರುಹುವುದು ಹಿತವೆನುತ ಸತ್ಯಲೋಕಕ್ಕೈದಿದನು ॥ ಬರುತಲೆರಗಿದ ಸುತನ ಕಾಣುತ। ಸರಸಿಜಾಸನ ಸನಿಹದಲಿ ಕು । ಳ್ಳಿರಿಸಿ ಕೇಳಿದ ಬಂದ ಕಾರ್ಯವನೀಗ ಬೆಸಸೆನಲು ॥ ೧॥

ಮೋಹನ – ಅಷ್ಟತಾಳ

ತಾತ ಲಾಲಿಸಿ ಕೇಳ್ ಬಿನ್ನಪವ । ತಾವ । ಜಾತನಾ ಪೇಳುವೆ ಬಂದ ಕಾರಣವ ॥ ಸುದತಿಯಾಗಿಹ ಸಿರಿದೇವಿ । ಒಂದು । ಕುದುರೆಯ ಬೆಡಗ ಮೆಚ್ಚುತ ತನ್ನ ಮನದಿ ॥ ಪದುಮನಾಭನು ಖಿಡಿಗೆದರಿ । ಎಲೆ । ಚದುರೆ ನೀ ಹಯವಾಗೆಂದೆನುತಲೆ ಶಪಿಸಿ ॥ ೧ ॥ ಅರಸಿಯ ಕಾಂಬುಡುತ್ಸಹದಿ । ರೂಪಾಂ । ತರದೊಳಗಶ್ವದ ತೆರ ವೇಶಧರಿಸಿ ॥ ಬೆರೆತು ತಮ್ಮೊಳು ಗರ್ಭಧರಿಸಿ । ಆ । ತರುಣಿ ಪೆತ್ತಿಹ ಶಿಶು ಇರುವುದಾಶ್ರಮದಿ ॥ ೨ ॥

ಭಾಮಿನಿ

ಮುನಿಪ ಸಲಹುವನೆನುತ ತೆರಳಲು । ಕನಕಗರ್ಭನು ಮನದಿ ತಿಳಿದನು । ದನುಜರಿಂಗವಸಾನ ಕಾಲವು ಸನಿಹದೊಳಗೆನುತ ॥ ೧ ॥ ಕ್ಷಣದೊಳದ ಹರಿಹರರಿಗೊರೆವುತ । ತನಯನನು ಕರೆತಂದು ದುರುಳರ । ಹನನಗೈಯಲು ಬೇಕೆನುತಲಾತ್ರಿತಯಮೂರ್ತಿಗಳು ॥ ೨ ॥

ಕೇದಾರಗೌಳ – ಅಷ್ಟತಾಳ

ಪತಿತ ಪಾವನರ ಕಂಡತಿ ಹರುಷದೊಳೆದ್ದು । ಯತಿ ಭಕ್ತಿಯೆಂದೆರಗಿ ॥ ಮತಿವಂತನವ ಷೋಡಷೋಪಚಾರಗಳಿಂದ । ಹಿತದೊಳರ್ಚಿಸಿ ಪೇಳ್ದನು ॥ ೧ ॥ ಬಡವ ನಾನಾಗಿಹೆ ಎಡರು ಪೂಜೆಯೊಳಿರೆ ಒಡನದ ಮನ್ನಿಸುತ ॥ ಜಡಜ ಮುಖ್ಯ ರೈತಂದ ಕಾರ್ಯವೆ । ನ್ನೊಡನೆ ಪೇಳುವದೆಂದನು ॥ ೨ ॥

ಸಾಂಗತ್ಯ – ರೂಪಕತಾಳ

ಋಷಿವರ್ಯ ನೀನೋರ್ವನೆಸೆದ ಬಾಲನ ಪಡೆ । ದೊಸಗೆನಾರದನದ ತಿಳುಹೆ ॥ ಅಸಮಸಾಹಸನಾದ ತರಳನ ನೀ ಕಳುಹಿಸಲು ಎಮ್ಮೊಡನೆ ಲೇಸಹುದು ॥ ಬಣ್ಣದ ಮಾತಿದು ಸಣ್ಣವನವನಿನ್ನು । ಕಣ್ಣಲ್ಲಿ ಕಂಡು ನಿಮ್ಮರಿಯ । ಚಿಣ್ಣನೊಳೇನಿದೆ ಉನ್ನತವಹ ಕಾರ್ಯ । ಎನ್ನೊಳಗದ ಪೇಳಿರೆಂದ ॥ ೧॥

ಭಾಮಿನಿ

ಮುನಿವರ್ಯನಿಂತೆನಲು ಪೇಳ್ದರು । ವನಜ ಸಂಭವ ವರದ ಬಲುಹಿಲಿ । ದನುಜರೀರ್ವರು ಕೊಬ್ಬಿ ದಣಿಸುತ್ತಿಹರು ಸುರನರರ ॥ ತನಯ ನಿವಿನಿಂದಲ್ಲದವರಿಗೆ ಹನನಗೊಳಿಸುವ ರಿಲ್ಲವದರಿಂ । ವಿನಯದಿಂ ನೀ ಕಳುಹಬೇಕೆನಲಾಗ ಯತಿಯೊರೆದ॥ ೧॥

ಸೌರಾಷ್ಟ್ರ – ತ್ರಿವುಡೆ

ಸೃಷ್ಟಿ ಸ್ಥಿತಿ ಲಯಕಧಿಕ ನೀವೆಂ । ದಿಷ್ಟರಿತ ಮೇಲಿನ್ನು ಕುವರನು । ದುಷ್ಟರನು ಸದೆ ಬಡಿದು ಪಾಲಿಪನಿಷ್ಟವನ್ನು ॥ ೧ ॥

ಏಕಚಕ್ರನ ಪ್ರವೇಶ

ಭೈರವಿ – ಏಕತಾಳ

ಏಕವೀರ ತಾನಾಗ ಬಂ। ದಾಕೂಡಲೆ ಅತಿಬೇಗ ॥ ಸಾಕುಪಿತನ ಅಡಿಗೆರಗಿ । ಕೇಳ್ದಾ ಕರಣಿಕರನು ನೋಡಿ ॥ ೧ ॥

ಸೌರಾಷ್ಟ್ರ – ತ್ರಿವುಡೆ ತಾಳ

ನಂದನನ ಪಿಡಿದೆತ್ತಿ ಮುನಿಪತಿ । ಚಂದದಿಂ ಪಿಡಿದೆತ್ತಿ ಮುದ್ದಿಸಿ । ಸುಂದರ ತ್ರೈಮೂರ್ತಿಗಳು ನೀ ವಂದಿಸುವುದು ॥ ೧ ॥ ಕಂದನವರೊಡಗೊಂಡು ಪೋಪುದು । ಮಂದಮತಿಗಳ ಕೊಂದು ಸುರನರ । ವೃಂದವನು ಪೊರೆಯುವುದು ನಿನಗಿದು ಸಂದ ಬಿರುದು ॥ ೨ ॥ ಯಾತಕಿದಕನುಮಾನ ನಿಮ್ಮಯ । ಜಾತ ನಾನಿರೆ ನಿಮ್ಮಡಿಯ ದಯ । ಮಾತ್ರದಿಂ ನಾ ಗೆಲುವೆ ಖೂಳರ । ಭೀತಿ ಬಿಡಿರಿ ॥ ೧ ॥ ಚಿಕ್ಕವನು ನಾನೆಂಬ ಭಯವೇ । ತಕ್ಕೆ ತ್ರೈಮೂರ್ತಿಗಳ ಬಲವಿರೆ । ರಕ್ಕಸರ ಲೆಕ್ಕಿಸೆನು । ಮೋಹವು ತಕ್ಕುದಲ್ಲ ॥ ೨ ॥

ಆರ್ಯಸವ್ಯಾ – ಏಕತಾಳ

ಕಂದನ ನುಡಿಯನು ಕೇಳುತ ಮುನಿಪತಿ । ಅಂದದೊಳಾಯುಧವಾ ॥ ಮಂದಹಾಸದಿ ತಾ ನೀಯುತ ಹರಸಿ ಮುಕುಂದಗೆ ಕೈಮುಗಿದಾ ॥ ೧ ॥

ಮಾರವಿ – ಏಕತಾಳ

ಶಕ್ತ್ಯಾಯುಧವನು ಧರಿಸುತ ತರಳ ತ್ರೈಮೂರ್ತಿಗಳಿಗೆ ನಮಿಸಿ ॥ ಧೂರ್ತರ ಶಿರ ಕತ್ತರಿಪಡೆ ಜವದೊಳ । ಗತ್ತ ನಡೆದ ಸಹಸಿ ॥ ೧ ॥

ಯುದ್ಧಭಾಗ

ಶಂಕರಾಭರಣ – ಮಟ್ಟೆತಾಳ

ಎಲವೊ ತರಳ ಪೊಕ್ಕು ನಮ್ಮ । ಪೊಳಲ ಬಂದೆಯಾ ॥ ಸಲದು ನಿನ್ನ ಎಳೆಯ ಬುದ್ಧಿ । ತಲೆಯ ಕೊಡುವೆಯ ॥ ೧ ॥ ತರಳನಹುದು ಶರಕೆ ನಿನ್ನ । ಶಿರವ ನೀವೆಯ ॥ ದುರುಳತನವ ತೊರೆದು ಎನ್ನ । ಶರಣು ಬರುವೆಯ ॥ ೧ ॥ ವನಜಭವನ ವರದ ಬಲದಿ । ಗಣಿಸೆ ನಿನ್ನನು ॥ ನೆನೆದು ಶಿಶುವ ಹತ್ಯೆ ಬೇಡ । ಎನುತ ಬಿಟ್ಟೆನು ॥ ೨ ॥ ದುರುಳಕೇಳು ವರದ ಬಲುಹು । ಸರಿಯಿತಿಂದಿಗೆ । ಧುರದಿ ಹೆಣಸಿ ನೋಡು ನಿನಗೆ । ಮರಣ ಕಾದಿದೆ ॥ ೨ ॥ ಸುರನರೋರಗರರ ಮುಖ್ಯ । ಗರುವವಿಳಿಸಿಹೆ॥ ತರಳನಿರುವೆ ನೀ ಸಮಾನ । ಪರಿಯ ನರಿತಿಹೆ ॥ ೧ ॥ ಪಶುವ ಹಾಲ ಕುಡಿದ ಜನರೆ। ಅಸುವ ತೊರೆವರು । ವಿಷವ ಕುಡಿದ ನಾತನ । ರಸೆಯೊಳಿರ್ಪುದು ॥ ೧ ॥ ಮರೆಯ ಹೊಕ್ಕು ನಿನ್ನ ತ್ರಿತಯ । ಮೂರ್ತಿ ಸುರವರ । ರೆದು ತಂದು ಎನ್ನ ಮುಂದೆ । ಕೊರಳಕ್ಕೊಯ್ಸುವ ॥ ೨ ॥

ಭಾಮಿನಿ

ದುರುಳ ಖಳರಸುವಳಿಯೆ । ಸುರರಂ । ಬರದಿ ಪೂಮಳೆಗರೆಯೆ ಸುರಪನ। ಕರೆದು ಪಟ್ಟವ ಕಟ್ಟಿ ತೆರಳಿದವರವರ ಪುರಕೆ ॥ ೧ ॥

॥ ಮಂಗಲಂ ॥

(130 ಪದಗಳು?)

––*–*–*–*–*–*–*–*

"ನನ್ನ ಬದುಕಿಗೆ ಯಕ್ಷಗಾನ ನೆರವಾಗಿದೆ,

ಬದುಕನ್ನು ಆಧರಿಸಿದೆ, ತೃಪ್ತಿಯಾಗಿದ್ದೇನೆ.

ರಂಗವಿಂದು ಹಲವು ಪಲ್ಲಟಗಳಿಗೆ

ಸಿಲುಕಿರುವಾಗ ಈ ಕಾಲಕ್ಕೆ

ನನಗೆ ಪ್ರಾಯ ಆದುದು ನನ್ನ ಪುಣ್ಯ"

– ತೆಂಕಬೈಲು ತಿರುಮಲೇಶ್ವರ ಶಾಸ್ತ್ರಿ

ಪ್ರಕಾಶನ

ಪದ್ಯಾಣ ಪ್ರಶಸ್ತಿ ಸಮಿತಿ

ಕಲ್ಮಡ್ಕ, ಸುಳ್ಯ ತಾಲೂಕು (ದ.ಕ.)